# ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988

(1988ರ ಅಧಿನಿಯಮ ಸಂಖ್ಯೆ 49)

**[24-9-2001ರ ಭಾರತ ರಾಜಪತ್ರದ IX ನೇ ಭಾಗದ, 1ನೇ ವಿಭಾಗದ, 21ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 20 ರಿಂದ 30 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಅಧ್ಯಾಯ - I**

**ಪ್ರಾರಂಭಿಕ**

**ಪ್ರಕರಣಗಳು:**


1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು

**ಅಧ್ಯಾಯ- II**

**ವಿಶೇಷ ನ್ಯಾಯಾಧೀಶರ ನೇಮಕ**

3. ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಲು ಅಧಿಕಾರ
4. ವಿಶೇಷ ನ್ಯಾಯಾಧೀಶರು ಅಧಿವಿಚಾರಣೆ ಮಾಡಬಹುದಾದ ಪ್ರಕರಣಗಳು
5. ವಿಶೇಷ ನ್ಯಾಯಾಧೀಶನ ಪ್ರಕ್ರಿಯೆ ಮತ್ತು ಅಧಿಕಾರಗಳು
6. ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಲು ಅಧಿಕಾರ

**ಅಧ್ಯಾಯ- III**

**ಅಪರಾಧಗಳು ಮತ್ತು ದಂಡಗಳು**

7. ಪದೀಯ ಕಾರ್ಯಕ್ಕೆ ಸಂಬಂಧಿಸಿದಂತೆ ಕಾನೂನುಸಮ್ಮತ ಪರಿಶ್ರಮ ಧನವನ್ನು ಹೊರತುಪಡಿಸಿ ಇತರ ಪರಿತೋಷವನ್ನು ಲೋಕನೌಕರನು ತೆಗೆದುಕೊಳ್ಳುವುದು
8. ಭ್ರಷ್ಟ ಅಥವಾ ಕಾನೂನುಬಾಹಿರ ವಿಧಾನದ ಮೂಲಕ ಲೋಕನೌಕರನ ಮೇಲೆ ಪ್ರಭಾವ ಬೀರಲು ಪರಿತೋಷವನ್ನು ತೆಗೆದುಕೊಳ್ಳುವುದು
9. ಲೋಕನೌಕರನೊಂದಿಗೆ ವೈಯಕ್ತಿಕ ಪ್ರಭಾವವನ್ನು ಬೀರುವುದಕ್ಕಾಗಿ ಪರಿತೋಷವನ್ನು ತೆಗೆದುಕೊಳ್ಳುವುದು
10. 8 ಅಥವಾ 9ನೇ ಪ್ರಕರಣಗಳಲ್ಲಿ ಪರಿಭಾಷಿಸಿರುವ ಅಪರಾಧಗಳನ್ನು ಲೋಕನೌಕರನು ದುಷ್ಪ್ರೇರಿಸುವುದಕ್ಕಾಗಿ ದಂಡನೆ
11. ಲೋಕನೌಕರನ ವ್ಯವಹರಣೆಯಲ್ಲಿ ಅಥವಾ ಅವನು ನಡೆಸಿದ ವ್ಯವಹಾರದಲ್ಲಿ ಸಂಬಂಧಪಟ್ಟ ವ್ಯಕ್ತಿಯಿಂದ ಪ್ರತಿಫಲವಿಲ್ಲದೆ ಬೆಲೆಬಾಳುವ ವಸ್ತುವನ್ನು ಅಂಥ ಲೋಕನೌಕರನು ಪಡೆದುಕೊಳ್ಳುವುದು
12. 7 ಅಥವಾ 11ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ
13. ಲೋಕನೌಕರನಿಂದ ಆಪರಾಧಿಕ ದುರ್ನಡತೆ
14. 8, 9 ಮತ್ತು 12ನೇ ಪ್ರಕರಣಗಳ ಮೇರೆಗಿನ ಅಪರಾಧವನ್ನು ರೂಢಿಗತವಾಗಿ ಮಾಡುವುದು
15. ಪ್ರಯತ್ನಕ್ಕಾಗಿ ದಂಡ

16. ಜುಲ್ಮಾನೆಯನ್ನು ನಿಗದಿಪಡಿಸುವುದಕ್ಕಾಗಿ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ವಿಷಯಗಳು

## ಅಧ್ಯಾಯ-IV

### ಈ ಅಧಿನಿಯಮದ ಮೇರೆಗಿನ ಪ್ರಕರಣಗಳ ಬಗ್ಗೆ ತನಿಖೆ

17. ತನಿಖೆ ನಡೆಸಲು ಅಧಿಕೃತಗೊಳಿಸಿರುವ ವ್ಯಕ್ತಿಗಳು
18. ಬ್ಯಾಂಕರುಗಳ ಪುಸ್ತಕಗಳನ್ನು ಪರಿಶೀಲಿಸುವ ಅಧಿಕಾರ

## ಅಧ್ಯಾಯ -V

### ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಮಂಜೂರಾತಿ ಮತ್ತು ಇತರ ಸಂಕೀರ್ಣ ಉಪಬಂಧಗಳು

19. ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಪೂರ್ವ ಮಂಜೂರಾತಿಯು ಅವಶ್ಯ
20. ಲೋಕನೌಕರನು ಕಾನೂನು ಸಮ್ಮತ ಪರಿಶ್ರಮ ಧನವನ್ನು ಹೊರತುಪಡಿಸಿ ಇತರ ಪರಿತೋಷವನ್ನು ಅಂಗೀಕರಿಸುವಲ್ಲಿ ಪೂರ್ವಭಾವನೆ
21. ಆಪಾದಿತ ವ್ಯಕ್ತಿಯು ಸಕ್ಷಮವಾದ ಸಾಕ್ಷಿದಾರನಾಗಿರತಕ್ಕುದು
22. ಕೆಲವು ಮಾರ್ಪಾಡುಗಳಿಗೆ ಒಳಪಟ್ಟು ದಂಡಪ್ರಕ್ರಿಯಾ ಸಂಹಿತೆ, 1973 ಅನ್ವಯವಾಗತಕ್ಕುದು
23. 13(1) (ಸಿ) ಪ್ರಕರಣದ ಮೇರೆಗಿನ ಅಪರಾಧಕ್ಕೆ ಸಂಬಂಧಪಟ್ಟಂತೆ ಆರೋಪದಲ್ಲಿನ ವಿವರಗಳು
24. ಲಂಚ ಕೊಡುವವನು ಕೊಟ್ಟ ಹೇಳಿಕೆಯು ಅವನನ್ನು ಪ್ರಾಸಿಕ್ಯೂಷನ್ನಿಗೆ ಒಳಪಡಿಸತಕ್ಕುದಲ್ಲ
25. ಸೇನಾ, ನೌಕಾ ಮತ್ತು ವಾಯುಸೇನೆ ಅಥವಾ ಇತರ ಕಾನೂನಿಗೆ ಬಾಧಕವನ್ನುಂಟುಮಾಡತಕ್ಕುದಲ್ಲ
26. 1952ರ ಅಧಿನಿಯಮ 46ರ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶರು ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶರಾಗಿರತಕ್ಕುದು
27. ಅಪೀಲು ಮತ್ತು ಪುನರೀಕ್ಷಣೆ
28. ಅಧಿನಿಯಮವು ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕುದು
29. 1944ರ 38ನೇ ಅಧ್ಯಾದೇಶದ ತಿದ್ದುಪಡಿ
30. ನಿರಸನ ಮತ್ತು ಉಳಿಸುವಿಕೆ
31. 1860ರ 45ನೇ ಅಧಿನಿಯಮದ ಕೆಲವು ಪ್ರಕರಣಗಳನ್ನು ಲೋಪಿಸುವುದು.

# ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988

(1988ರ ಅಧಿನಿಯಮ ಸಂಖ್ಯೆ 49)

[9ನೇ ಸೆಪ್ಟೆಂಬರ್, 1988]

ಭ್ರಷ್ಟಾಚಾರವನ್ನು ಪ್ರತಿಬಂಧಿಸುವುದಕ್ಕೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿನ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೊಂಬತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು: -

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 ಎಂದು ಕರೆಯತಕ್ಕುದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಇದು ಭಾರತದ ಹೊರಗಡೆ ಇರುವ ಭಾರತದ ಎಲ್ಲಾ ನಾಗರೀಕರಿಗೂ ಸಹ ಅನ್ವಯವಾಗುತ್ತದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಚುನಾವಣೆ" ಎಂದರೆ, ಸಂಸತ್ತು ಅಥವಾ ಯಾವುದೇ ವಿಧಾನಮಂಡಲ, ಸ್ಥಳೀಯ ಪ್ರಾಧಿಕಾರ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸದಸ್ಯರನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ಯಾವುದೇ ಕಾನೂನಿನ ಮೇರೆಗೆ ಯಾವುದೇ ವಿಧಾನದ ಮೂಲಕ ನಡೆಸಿದ ಯಾವುದೇ ಚುನಾವಣೆ;

(ಬಿ) "ಸಾರ್ವಜನಿಕ ಕರ್ತವ್ಯ" ಎಂದರೆ ಯಾವ ಕರ್ತವ್ಯವನ್ನು ನಿರ್ವಹಿಸುವಲ್ಲಿ ರಾಜ್ಯವು, ಸಾರ್ವಜನಿಕರು ಅಥವಾ ಒಟ್ಟಾರೆ ಸಮುದಾಯವು ಹಿತಾಸಕ್ತಿಯನ್ನು ಹೊಂದಿರುವುದೋ ಆ ಕರ್ತವ್ಯ;

**ವಿವರಣೆ:**- ಈ ಖಂಡದಲ್ಲಿ "ರಾಜ್ಯ ಎಂಬುದು ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಿದ ನಿಗಮ ಅಥವಾ ಸರ್ಕಾರದ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1) ರ 617ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಸರ್ಕಾರಿ ಕಂಪನಿಯ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರಿಂದ ನೆರವು ಪಡೆಯುವ ಪ್ರಾಧಿಕಾರ ಅಥವಾ ನಿಕಾಯವನ್ನು ಒಳಗೊಳ್ಳುತ್ತದೆ;

(ಸಿ) "ಲೋಕನೌಕರ" ಎಂದರೆ -

(i) ಸರ್ಕಾರಿ ಸೇವೆಯಲ್ಲಿರುವ ಅಥವಾ ಅದರಿಂದ ವೇತನವನ್ನು ಪಡೆಯುವ ಅಥವಾ ಯಾವುದೇ ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಫೀಜುಗಳು ಅಥವಾ ಕಮಿಷನ್ನಿನ ಸ್ವರೂಪದಲ್ಲಿ ಸರ್ಕಾರದಿಂದ ಪರಿಶ್ರಮಧನವನ್ನು ಪಡೆಯುತ್ತಿರುವ ಯಾವನೇ ವ್ಯಕ್ತಿ;

(ii) ಸ್ಥಳೀಯ ಪ್ರಾಧಿಕಾರದ ಸೇವೆಯಲ್ಲಿರುವ ಅಥವಾ ಅದರಿಂದ ವೇತನವನ್ನು ಪಡೆಯುತ್ತಿರುವ ಯಾವನೇ ವ್ಯಕ್ತಿ;

(iii) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ನಿಗಮ ಅಥವಾ ಸರ್ಕಾರದ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಸರ್ಕಾರಿ ಕಂಪನಿಯ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರಿಂದ ನೆರವು ಪಡೆಯುವ ಪ್ರಾಧಿಕಾರ ಅಥವಾ ನಿಕಾಯದ ಸೇವೆಯಲ್ಲಿರುವ ಅಥವಾ ಅದರಿಂದ ವೇತನವನ್ನು ಪಡೆಯುತ್ತಿರುವ ಯಾವನೇ ವ್ಯಕ್ತಿ ;

(iv) ತಾನಾಗಿಯೇ ಆಗಲಿ ಅಥವಾ ವ್ಯಕ್ತಿಗಳ ಯಾವುದೇ ನಿಕಾಯದ ಸದಸ್ಯನಿಂದಾಗಲಿ ಯಾವುದೇ ನ್ಯಾಯ ನಿರ್ಣಯಕಾರಿ ಪ್ರಕಾರ್ಯಗಳನ್ನು ನಿರ್ವಹಿಸಲು ಕಾನೂನು ಮೂಲಕ ಶಕ್ತಗೊಳಿಸಿದ ಯಾವನೇ ವ್ಯಕ್ತಿಯನ್ನು ಒಳಗೊಂಡು ಯಾವನೇ ನ್ಯಾಯಾಧೀಶ;

(v) ನ್ಯಾಯಾಲಯವು ನೇಮಕ ಮಾಡಿದ ಲಿಕ್ವಿಡೇಟರ್, ರಿಸೀವರ್ ಅಥವಾ ಕಮಿಷನರನನ್ನು ಒಳಗೊಂಡು ನ್ಯಾಯಾಡಳಿತಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಅಂಥ ನ್ಯಾಯಾಲಯವು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿ;

(vi) ನ್ಯಾಯಾಲಯವು ಅಥವಾ ಸಕ್ಷಮ ಸಾರ್ವಜನಿಕ ಪ್ರಾಧಿಕಾರವು ತೀರ್ಮಾನ ಅಥವಾ ವರದಿಗಾಗಿ ಯಾವುದೇ ವ್ಯಾಜ್ಯ ಅಥವಾ ವಿಷಯವನ್ನು ಯಾರಿಗೆ ಒಪ್ಪಿಸಿದೆಯೋ ಆ ಯಾವನೇ ಮಧ್ಯಸ್ಥ ಅಥವಾ ಇತರ ವ್ಯಕ್ತಿ;

(vii) ಯಾವ ಪದವನ್ನು ಧಾರಣ ಮಾಡಿರುವ ಕಾರಣದಿಂದಾಗಿ, ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು, ಪ್ರಕಟಿಸಲು, ಇಟ್ಟುಕೊಂಡು ಬರಲು ಅಥವಾ ಪರಿಷ್ಕರಿಸಲು ಅಥವಾ ಚುನಾವಣೆ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸಲು ವ್ಯಕ್ತಿಯನ್ನು ಶಕ್ತಗೊಳಿಸಲಾಗಿದೆಯೋ ಆ ಪದವನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿ;

(viii) ಯಾವ ಪದವನ್ನು ಧಾರಣಮಾಡಿರುವ ಕಾರಣದಿಂದಾಗಿ ಯಾವುದೇ ಸಾರ್ವಜನಿಕ ಕರ್ತವ್ಯವನ್ನು ನೆರವೇರಿಸಲು ವ್ಯಕ್ತಿಯನ್ನು ಅಧಿಕೃತಗೊಳಿಸಲಾಗಿದೆಯೋ ಅಥವಾ ಅಗತ್ಯಪಡಿಸಲಾಗಿದೆಯೋ ಆ ಪದವನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿ;

(ix) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ, ಅಥವಾ ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನಿಗಮ ಅಥವಾ ಸರ್ಕಾರ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1) ರ 617ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಸರ್ಕಾರಿ ಕಂಪನಿಯ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರಿಂದ ನೆರವು ಪಡೆಯುವ ಯಾವುದೇ ಪ್ರಾಧಿಕಾರ ಅಥವಾ ನಿಕಾಯದಿಂದ ಯಾವುದೇ ಹಣಕಾಸಿನ ನೆರವನ್ನು ಸ್ವೀಕರಿಸುವ ಅಥವಾ ಸ್ವೀಕರಿಸಿರುವ ಕೃಷಿ, ಕೈಗಾರಿಕೆ, ವ್ಯಾಪಾರ ಅಥವಾ ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿರುವ ನೋಂದಾಯಿತ ಸಹಕಾರಿ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಇತರ ಪದಾಧಿಕಾರಿಯಾಗಿರುವ ಯಾವನೇ ವ್ಯಕ್ತಿ;

(x) ಆಯೋಗ ಅಥವಾ ಮಂಡಲಿಯ ಪರವಾಗಿ ಯಾವುದೇ ಪರೀಕ್ಷೆಯನ್ನು ನಡೆಸುವುದು ಅಥವಾ ಯಾವುದೇ ಆಯ್ಕೆಯನ್ನು ಮಾಡುವುದಕ್ಕಾಗಿ, ಯಾವುದೇ ಹೆಸರಿನಿಂದ ಕರೆಯಲಾದ ಯಾವುದೇ ಅಂಥ ಸೇವಾ ಆಯೋಗ ಅಥವಾ ಮಂಡಲಿಯು ಅಧ್ಯಕ್ಷ, ಸದಸ್ಯ, ಅಥವಾ ನಿಯೋಜಿತ ಅಥವಾ ಅಂಥ ಆಯೋಗ ಅಥವಾ ಮಂಡಲಿಯು ನೇಮಕ ಮಾಡಿದ ಯಾವುದೇ ಆಯ್ಕೆ ಸಮಿತಿಯ ಸದಸ್ಯನಾಗಿರುವ ಯಾವನೇ ವ್ಯಕ್ತಿ;

(xi) ಯಾವುದೇ ವಿಶ್ವವಿದ್ಯಾನಿಲಯದ ಕುಲಪತಿ ಅಥವಾ ಯಾವುದೇ ಆಡಳಿತ ಮಂಡಲಿಯ ಸದಸ್ಯ, ಪ್ರಾಧ್ಯಾಪಕ, ರೀಡರು, ಲೆಕ್ಚರರ್ ಅಥವಾ ಯಾವನೇ ಇತರ ಉಪಾಧ್ಯಾಯ ಅಥವಾ ಯಾವುದೇ ಪದನಾಮದಿಂದ ಕರೆಯಲಾದ ಯಾವನೇ ನಿಯೋಜಿತ ವ್ಯಕ್ತಿ ಮತ್ತು ಪರೀಕ್ಷೆಯನ್ನು ನಿರ್ವಹಿಸುವುದು ಅಥವಾ ನಡೆಸುವುದಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯ ಅಥವಾ ಯಾವುದೇ ಇತರ ಸಾರ್ವಜನಿಕ ಪ್ರಾಧಿಕಾರವು ಯಾರ ಸೇವೆಗಳನ್ನು ಪಡೆದಿದೆಯೋ ಆ ಯಾವನೇ ವ್ಯಕ್ತಿ;

(xii) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದಿಂದ ಯಾವುದೇ ಹಣಕಾಸಿನ ನೆರವನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸಿರುವ ಯಾವುದೇ ರೀತಿಯಲ್ಲಿ ಸ್ಥಾಪಿತವಾಗಿರುವ ಶಿಕ್ಷಣ, ವೈಜ್ಞಾನಿಕ, ಸಾಮಾಜಿಕ, ಸಾಂಸ್ಕೃತಿಕ ಅಥವಾ ಇತರ ಸಂಸ್ಥೆಯ ಪದಾಧಿಕಾರಿ ಅಥವಾ ಅದರಿಂದ ನಿಯೋಜಿತನಾಗಿರುವ ಯಾವನೇ ವ್ಯಕ್ತಿ;

**ವಿವರಣೆ 1 :-** ಸರ್ಕಾರದಿಂದ ನೇಮಕಗೊಂಡಿರಲಿ ಅಥವಾ ಇಲ್ಲದಿರಲಿ ಮೇಲಿನ ಯಾವುದೇ ಉಪಖಂಡದ ಅಡಿಯಲ್ಲಿ ಬರುವ ವ್ಯಕ್ತಿಗಳು ಲೋಕನೌಕರರಾಗಿರುತ್ತಾರೆ.

**ವಿವರಣೆ 2 :-** "ಲೋಕನೌಕರ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ಅವುಗಳನ್ನು, ಆ ಪದವನ್ನು ಧಾರಣ ಮಾಡಲು ಅವನ ಹಕ್ಕಿನಲ್ಲಿ ಯಾವುದೇ ಕಾನೂನು ದೋಷವಿರಬಹುದಾದರೂ, ಲೋಕನೌಕರನ ಪದದ ವಾಸ್ತವ ಸ್ವಾಧೀನದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೆಂದು ತಿಳಿದುಕೊಳ್ಳತಕ್ಕುದು.

## ಅಧ್ಯಾಯ - II

## ವಿಶೇಷ ನ್ಯಾಯಾಧೀಶರ ನೇಮಕ

**3. ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಲು ಅಧಿಕಾರ.-** (1) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಈ ಕೆಳಕಂಡ ಅಪರಾಧಗಳನ್ನು ಅಧಿವಿಚಾರಣೆ ಮಾಡಲು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶ ಅಥವಾ ಪ್ರದೇಶಗಳಿಗಾಗಿ ಅಥವಾ ಅಂಥ ಪ್ರಕರಣ ಅಥವಾ ಪ್ರಕರಣಗಳ ಗುಂಪಿಗಾಗಿ ಅವಶ್ಯವಾಗಬಹುದಾದಷ್ಟು ಸಂಖ್ಯೆಯ ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಬಹುದು, ಎಂದರೆ:-

(ಎ) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧ; ಮತ್ತು

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧವನ್ನು ಮಾಡಲು ಯಾವುದೇ ಒಳಸಂಚು ಅಥವಾ ಆ ಅಪರಾಧವನ್ನು ಮಾಡಲು ಯಾವುದೇ ಪ್ರಯತ್ನ ಅಥವಾ ಆ ಅಪರಾಧದ ಬಗ್ಗೆ ಯಾವುದೇ ದುಷ್ಪ್ರೇರಣೆ;

(2) ಒಬ್ಬ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ವಿಶೇಷ ನ್ಯಾಯಾಧೀಶನೆಂದು ನೇಮಕಗೊಳ್ಳಲು ಅವನು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ಸೆಷನ್ಸ್ ನ್ಯಾಯಾಧೀಶ ಅಥವಾ ಅಡಿಷನಲ್ ಸೆಷನ್ಸ್ ನ್ಯಾಯಾಧೀಶ ಅಥವಾ ಸಹಾಯಕ ಸೆಷನ್ಸ್ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಹೊರತು, ಅರ್ಹನಾಗಿರತಕ್ಕುದಲ್ಲ.

**4. ವಿಶೇಷ ನ್ಯಾಯಾಧೀಶರು ಅಧಿವಿಚಾರಣೆ ಮಾಡಬಹುದಾದ ಪ್ರಕರಣಗಳು.-** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ಇದರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ, ಏನೇ ಅಡಕವಾಗಿದ್ದಾಗ್ಯೂ 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳನ್ನು ವಿಶೇಷ ನ್ಯಾಯಾಧೀಶರು ಮಾತ್ರವೇ ಅಧಿವಿಚಾರಣೆ ಮಾಡತಕ್ಕುದು.

(2) 3ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ಅಪರಾಧವನ್ನೂ ಅದನ್ನು ಯಾವ ಪ್ರದೇಶದೊಳಗೆ ಮಾಡಲಾಯಿತೋ ಆ ಪ್ರದೇಶದ ವಿಶೇಷ ನ್ಯಾಯಾಧೀಶನು ಅಥವಾ ಸಂದರ್ಭಾನುಸಾರ, ಆ ಪ್ರಕರಣಕ್ಕಾಗಿ ನೇಮಕಗೊಂಡ ವಿಶೇಷ ನ್ಯಾಯಾಧೀಶನು, ಅಥವಾ ಅಂಥ ಪ್ರದೇಶಕ್ಕಾಗಿ ಒಬ್ಬನಿಗಿಂತ ಹೆಚ್ಚು ವಿಶೇಷ ನ್ಯಾಯಾಧೀಶರು ಇರುವಲ್ಲಿ, ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಅವರಲ್ಲೊಬ್ಬನು ಅಧಿವಿಚಾರಣೆ ಮಾಡತಕ್ಕುದು;

(3) ಯಾವುದೇ ಪ್ರಕರಣವನ್ನು ಅಧಿವಿಚಾರಣೆ ಮಾಡುತ್ತಿರುವಾಗ, ವಿಶೇಷ ನ್ಯಾಯಾಧೀಶನು 3ನೇ ಪ್ರಕರಣದಲ್ಲಿ ನಿದಿಷ್ಟಪಡಿಸಿದ ಅಪರಾಧವನ್ನು ಹೊರತುಪಡಿಸಿ, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಮೇರೆಗೆ ಅದೇ ಅಧಿವಿಚಾರಣೆಯಲ್ಲಿ ಆಪಾದಿತನ ಮೇಲೆ ಆರೋಪಿಸಬಹುದಾದಂಥ ಯಾವುದೇ ಅಪರಾಧವನ್ನು ಸಹ ಅಧಿವಿಚಾರಣೆ ಮಾಡಬಹುದು.

(4) ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ಇದರಲ್ಲಿ ಏನೇ ಅಡಕವಾಗಿದ್ದಾಗ್ಯೂ, ವಿಶೇಷ ನ್ಯಾಯಾಧೀಶನು, ಕಾರ್ಯಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅಪರಾಧದ ಅಧಿವಿಚಾರಣೆಯನ್ನು ದೈನಂದಿನ ಆಧಾರದ ಮೇಲೆ ನಡೆಸತಕ್ಕುದು.

**5. ವಿಶೇಷ ನ್ಯಾಯಾಧೀಶನ ಪ್ರಕ್ರಿಯೆ ಮತ್ತು ಅಧಿಕಾರಗಳು.-** (1) ವಿಶೇಷ ನ್ಯಾಯಾಧೀಶನು, ಆಪಾದಿತನನ್ನು ಅಧಿವಿಚಾರಣೆಗಾಗಿ ಅವನಿಗೆ ಒಪ್ಪಿಸದೇ ಹೋಗಿದ್ದರೂ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು ಮತ್ತು ಆ ಆಪಾದಿತ ವ್ಯಕ್ತಿಗಳನ್ನು ಅಧಿವಿಚಾರಣೆ ಮಾಡುವಲ್ಲಿ ಅವನು, ಮ್ಯಾಜಿಸ್ಟ್ರೇಟನು ವಾರಂಟ್ ಪ್ರಕರಣಗಳ ಅಧಿವಿಚಾರಣೆ ಮಾಡುವುದಕ್ಕಾಗಿ, ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ರ ಮೂಲಕ ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸತಕ್ಕುದು.

(2) ವಿಶೇಷ ನ್ಯಾಯಾಧೀಶನು, ಒಂದು ಅಪರಾಧದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಿತ ಅಥವಾ ಭಾಗಿಯಾಗಿರುವನೆಂದು ಭಾವಿಸಲಾದ ಯಾವನೇ ವ್ಯಕ್ತಿಯ ಸಾಕ್ಷ್ಯವನ್ನು ಪಡೆದುಕೊಳ್ಳುವ ದೃಷ್ಟಿಯಿಂದ, ಅಪರಾಧಕ್ಕೆ ಸಂಬಂಧಪಟ್ಟಂತೆ ಅವನಿಗೆ ತಿಳಿದಿರುವ ಎಲ್ಲಾ ಸಂದರ್ಭಗಳನ್ನು ಪೂರ್ಣವಾಗಿ ಮತ್ತು ನಿಜವಾಗಿ ಅವನು ಬಹಿರಂಗಪಡಿಸುವ ಷರತ್ತಿನ ಮೇಲೆ, ಅಂಥ ವ್ಯಕ್ತಿಗೆ ಮತ್ತು ಮೂಲಕರ್ತನಾಗಿಯೇ ಆಗಲಿ ಅಥವಾ ದುಷ್ಪ್ರೇರಕನಾಗಿಯೇ ಆಗಲಿ ಅದನ್ನು ಮಾಡುವಲ್ಲಿ ಸಂಬಂಧಪಟ್ಟಿರುವ ಪ್ರತಿಯೊಬ್ಬ ಇತರ ವ್ಯಕ್ತಿಗೆ ಕ್ಷಮಾದಾನವನ್ನು ನೀಡಬಹುದು ಮತ್ತು ಹಾಗೆ ನೀಡಿದ ಯಾವುದೇ ಕ್ಷಮಾದಾನವನ್ನು ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ರ 308ನೇ ಪ್ರಕರಣದ (1) ರಿಂದ (5)ರ ವರೆಗಿನ ಉಪ-ಪ್ರಕರಣಗಳ ಉದ್ದೇಶಗಳಿಗಾಗಿ, ಆ ಸಂಹಿತೆಯ 307ನೇ ಪ್ರಕರಣದ ಮೇರೆಗೆ ನೀಡಲಾಗಿದೆ ಎಂದು ಭಾವಿಸತಕ್ಕುದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು, ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು, ಅವು ಈ ಅಧಿನಿಯಮಕ್ಕೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ವಿಶೇಷ ನ್ಯಾಯಾಧೀಶನ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕುದು; ಮತ್ತು ಸದರಿ ಉಪಬಂಧಗಳ ಉದ್ದೇಶಗಳಿಗಾಗಿ ಆ ವಿಶೇಷ ನ್ಯಾಯಾಧೀಶನ ನ್ಯಾಯಾಲಯವನ್ನು ಸೆಷನ್ಸ್ ನ್ಯಾಯಾಲಯವೆಂದು ಭಾವಿಸತಕ್ಕುದು ಮತ್ತು ವಿಶೇಷ ನ್ಯಾಯಾಧೀಶನ ಮುಂದೆ ಪ್ರಾಸಿಕ್ಯೂಷನನ್ನು ನಡೆಸುತ್ತಿರುವ ವ್ಯಕ್ತಿಯನ್ನು ಸರ್ಕಾರಿ ಪ್ರಾಸಿಕ್ಯೂಟರನೆಂದು ಭಾವಿಸತಕ್ಕುದು.

(4) ವಿಶೇಷವಾಗಿ ಮತ್ತು (3)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ಇದರ 326 ಮತ್ತು 475ನೇ ಪ್ರಕರಣಗಳ ಉಪಬಂಧಗಳು, ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ವಿಶೇಷ ನ್ಯಾಯಾಧೀಶನ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕುದು ಮತ್ತು ಸದರಿ ಉಪಬಂಧಗಳ ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಧೀಶನನ್ನು ಮ್ಯಾಜಿಸ್ಟ್ರೇಟನೆಂದು ಭಾವಿಸತಕ್ಕುದು.

(5) ವಿಶೇಷ ನ್ಯಾಯಾಧೀಶನು, ಅವನು ಅಪರಾಧಿ ಎಂದು ನಿರ್ಣಯಿಸಿದ ಯಾವನೇ ವ್ಯಕ್ತಿಗೆ ಅಂಥ ವ್ಯಕ್ತಿಯು ಅಪರಾಧಿ ಎಂದು ನಿರ್ಣೀತನಾಗಿರುವ ಅಪರಾಧದ ದಂಡನೆಗಾಗಿ ಕಾನೂನಿನ ಮೂಲಕ ಅಧಿಕೃತಗೊಳಿಸಲಾಗಿರುವ ಯಾವುದೇ ಶಿಕ್ಷೆಯನ್ನು ವಿಧಿಸಬಹುದು.

(6) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಅಧಿವಿಚಾರಣೆ ಮಾಡುವಾಗ ವಿಶೇಷ ನ್ಯಾಯಾಧೀಶನು ಆಪರಾಧಿಕ ಕಾನೂನು ತಿದ್ದುಪಡಿ ಅಧ್ಯಾದೇಶ, 1944ರ (1944ರ ಅಧ್ಯಾದೇಶ 38) ಮೇರೆಗೆ ಜಿಲ್ಲಾ ನ್ಯಾಯಾಧೀಶನು ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕುದು.

**6. ಕ್ಷಿಪ್ರವಾಗಿ ಅಧಿವಿಚಾರಣೆ ಮಾಡಲು ಅಧಿಕಾರ.-** (1) ಆವಶ್ಯಕ ಸರಕುಗಳ ಅಧಿನಿಯಮ, 1955 (1955ರ 10)ರ 12 ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ವಿಶೇಷ ಆದೇಶದ ಅಥವಾ ಆ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಿದ ಆದೇಶದ ಉಲ್ಲಂಘನೆಗೆ ಸಂಬಂಧಿಸಿ ಲೋಕನೌಕರನು ಮಾಡಿರುವುದಾಗಿ ಹೇಳಲಾದ 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧವನ್ನು ವಿಶೇಷ ನ್ಯಾಯಾಧೀಶನು ಅಧಿವಿಚಾರಣೆ ಮಾಡುವಲ್ಲಿ ಆಗ, ಈ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ-ಪ್ರಕರಣ ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 260ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ವಿಶೇಷ ನ್ಯಾಯಾಧೀಶನು ಆ ಅಪರಾಧವನ್ನು ಕ್ಷಿಪ್ರ ರೀತಿಯಲ್ಲಿ ಅಧಿವಿಚಾರಣೆ ಮಾಡತಕ್ಕುದು, ಮತ್ತು ಸದರಿ ಸಂಹಿತೆಯ 262 ರಿಂದ 265ರವರೆಗಿನ ಪ್ರಕರಣಗಳ (ಎರಡನ್ನೂ ಒಳಗೊಂಡು) ಉಪಬಂಧಗಳು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕುದು:

ಪರಂತು, ಈ ಪ್ರಕರಣದ ಮೇರೆಗಿನ ಕ್ಷಿಪ್ರ ಅಧಿವಿಚಾರಣೆಯಲ್ಲಿ, ಯಾವುದೇ ಅಪರಾಧ ನಿರ್ಣಯದ ಪ್ರಕರಣದಲ್ಲಿ ಒಂದು ವರ್ಷವನ್ನು ಮೀರದ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸುವುದು ವಿಶೇಷ ನ್ಯಾಯಾಧೀಶನಿಗೆ ಕಾನೂನು ಸಮ್ಮತವಾಗಿರತಕ್ಕುದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಅಧಿವಿಚಾರಣೆಯ ಪ್ರಾರಂಭದಲ್ಲಿ ಅಥವಾ ಅದು ನಡೆಯುತ್ತಿರುವಾಗ ವಿಶೇಷ ನ್ಯಾಯಾಧೀಶನಿಗೆ ಒಂದು ವರ್ಷವನ್ನು ಮೀರಿದ ಅವಧಿಯ ಕಾರಾವಾಸದ ಶಿಕ್ಷೆಯನ್ನು ವಿಧಿಸಬೇಕಾಗುವಂಥ ಸ್ವರೂಪದ ಪ್ರಕರಣವೆಂದು ಅಥವಾ ಅದನ್ನು ಯಾವುದೇ ಇತರ ಕಾರಣಕ್ಕಾಗಿ ಕ್ಷಿಪ್ರವಾಗಿ ಅಧಿವಿಚಾರಣೆ ಮಾಡುವುದು ಅನಪೇಕ್ಷಣೀಯವೆಂದು ಕಂಡುಬಂದರೆ ಆ ವಿಶೇಷ ನ್ಯಾಯಾಧೀಶನು, ಪಕ್ಷಕಾರರನ್ನು ಸುನಾವಣೆ ಮಾಡಿದ ತರುವಾಯ ಹಾಗೆಂದು ಆದೇಶವನ್ನು ದಾಖಲು ಮಾಡತಕ್ಕುದು ಮತ್ತು ಆ ತರುವಾಯ ಈಗಾಗಲೇ ಪರೀಕ್ಷಿಸಲಾಗಿರುವ ಯಾರೇ ಸಾಕ್ಷಿದಾರರನ್ನು ಪುನಃ ಕರೆಸತಕ್ಕುದು ಮತ್ತು ಆ ಪ್ರಕರಣವನ್ನು, ಮ್ಯಾಜಿಸ್ಟ್ರೇಟನ ಮೂಲಕ ವಾರಂಟು ಪ್ರಕರಣಗಳ ಅಧಿವಿಚಾರಣೆ ಮಾಡುವುದಕ್ಕಾಗಿ ಸದರಿ ಸಂಹಿತೆಯ ಮೂಲಕ ನಿಯಮಿಸಲಾದ ಪ್ರಕ್ರಿಯೆಗೆ ಅನುಸಾರವಾಗಿ ಸುನಾವಣೆ ಅಥವಾ ಮರುಸುನಾವಣೆ ಮಾಡತಕ್ಕುದು.

(2) ಈ ಅಧಿನಿಯಮದಲ್ಲಿ ಅಥವಾ ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ಕ್ಷಿಪ್ರವಾಗಿ ಅಧಿವಿಚಾರಣೆಯನ್ನು ಮಾಡಿರುವ ಯಾವ ಪ್ರಕರಣದಲ್ಲಿ ವಿಶೇಷ ನ್ಯಾಯಾಧೀಶನು ಒಂದು ತಿಂಗಳನ್ನು ಮೀರದ ಕಾರಾವಾಸದ ಶಿಕ್ಷೆಯನ್ನು ಮತ್ತು ಎರಡು ಸಾವಿರ ರೂಪಾಯಿಗಳನ್ನು ಮೀರದ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಿರುವನೋ, ಆ ಯಾವುದೇ ಪ್ರಕರಣದಲ್ಲಿ, ಅಂಥ ಶಿಕ್ಷೆಯ ಜೊತೆಗೆ ಸದರಿ ಸಂಹಿತೆಯ 452ನೇ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡಿರಲಿ ಅಥವಾ ಮಾಡಿಲ್ಲದೆ ಇರಲಿ, ಅಪರಾಧಿ ಎಂದು ನಿರ್ಣೀತನಾದ ವ್ಯಕ್ತಿಯು ಯಾವುದೇ ಅಪೀಲನ್ನು ಮಾಡಿಕೊಳ್ಳತಕ್ಕುದಲ್ಲ, ಆದರೆ ವಿಶೇಷ ನ್ಯಾಯಾಧೀಶನು ಹಿಂದೆ ಹೇಳಿದ ಪರಿಮಿತಿಗಳನ್ನು ಮೀರಿ ಯಾವುದೇ ಶಿಕ್ಷೆಯನ್ನು ವಿಧಿಸುವಲ್ಲಿ ಅಪೀಲು ಇರತಕ್ಕುದು.

## ಅಧ್ಯಾಯ – III

## ಅಪರಾಧಗಳು ಮತ್ತು ದಂಡಗಳು

**7. ಪದೀಯ ಕಾರ್ಯಕ್ಕೆ ಸಂಬಂಧಿಸಿದಂತೆ ಕಾನೂನು ಸಮ್ಮತ ಪರಿಶ್ರಮಧನವನ್ನು ಹೊರತುಪಡಿಸಿ ಇತರ ಪರಿತೋಷವನ್ನು ಲೋಕನೌಕರನು ತೆಗೆದುಕೊಳ್ಳುವುದು.–** ಲೋಕನೌಕರನಾಗಿದ್ದು ಅಥವಾ ಲೋಕನೌಕರನಾಗಲು ನಿರೀಕ್ಷಿಸುತ್ತಿರುವ ಯಾರೇ ಆಗಲಿ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯಸರ್ಕಾರ ಅಥವಾ ಸಂಸತ್ತು ಅಥವಾ ಯಾವುದೇ ರಾಜ್ಯದ ವಿಧಾನಮಂಡಲದೊಂದಿಗೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮ ಅಥವಾ 2ನೇ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಿರುವ ಸರ್ಕಾರಿ ಕಂಪನಿಯೊಂದಿಗೆ ಅಥವಾ ಹೆಸರಿಸಿರಲಿ ಅಥವಾ ಅನ್ಯಥಾ ಯಾವನೇ ಲೋಕ ನೌಕರನೊಂದಿಗೆ ಯಾವುದೇ ಪದೀಯ ಕಾರ್ಯವನ್ನು ಮಾಡುವುದು ಅಥವಾ ಅದನ್ನು ಮಾಡದೇ ಇರುವುದಕ್ಕಾಗಿ ಅಥವಾ ಅವನ ಪದೀಯ ಪ್ರಕಾರ್ಯಗಳನ್ನು ಚಲಾಯಿಸಿ, ಯಾವನೇ ವ್ಯಕ್ತಿಗೆ ಪಕ್ಷಪಾತ ಅಥವಾ ಅನಾದರಣೆಯನ್ನು ತೋರಿಸುವುದಕ್ಕಾಗಿ ಅಥವಾ ತೋರಿಸದೇ ಇರುವುದಕ್ಕಾಗಿ ಅಥವಾ ಯಾವನೇ ವ್ಯಕ್ತಿಗೆ ಯಾವುದೇ ಸೇವೆ ಅಥವಾ ಅಪಕಾರವನ್ನು ಮಾಡುವುದು ಅಥವಾ ಮಾಡಲು ಪ್ರಯತ್ನಿಸುವುದಕ್ಕಾಗಿನ ಉದ್ದೇಶ ಅಥವಾ ಬಹುಮಾನವಾಗಿ ಕಾನೂನು ಸಮ್ಮತ ಪರಿಶ್ರಮಧನವನ್ನು ಹೊರತುಪಡಿಸಿ ಯಾವುದೇ ಸ್ವರೂಪದ ಪರಿತೋಷವನ್ನು ತನಗಾಗಿಯೇ ಆಗಲಿ ಅಥವಾ ಯಾವನೇ ಇತರ ವ್ಯಕ್ತಿಗೇ ಆಗಲಿ ಯಾವನೇ ವ್ಯಕ್ತಿಯಿಂದ ಅಂಗೀಕರಿಸಿದರೆ ಅಥವಾ ಪಡೆದರೆ ಅಥವಾ ಅಂಗೀಕರಿಸಲು ಒಪ್ಪಿಕೊಂಡರೆ ಅಥವಾ ಪಡೆಯಲು ಪ್ರಯತ್ನಿಸಿದರೆ ಅವನು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಐದುವರ್ಷಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**ವಿವರಣೆ:–** (ಎ) "ಲೋಕನೌಕರನಾಗಲು ನಿರೀಕ್ಷಿಸುತ್ತಿರುವ", ಪದದ ನಿರೀಕ್ಷಣೆಯನ್ನು ಹೊಂದಿಲ್ಲದ ವ್ಯಕ್ತಿಯು ಅವನು ಇನ್ನೇನು ಪದದಲ್ಲಿರುವನೆಂಬ ನಂಬಿಕೆಯನ್ನು ಹುಟ್ಟಿಸಿ ಮತ್ತು ಆಗ ಅವರಿಗೆ ಸೇವೆಯನ್ನು ಸಲ್ಲಿಸುವೆನೆಂದು ಇತರರನ್ನು ವಂಚಿಸುವ ಮೂಲಕ ಪರಿತೋಷವನ್ನು ಪಡೆದರೆ, ಅವನು ವಂಚನೆಯ ಬಗ್ಗೆ ತಪ್ಪಿತಸ್ಥನಾಗಬಹುದು, ಆದರೆ ಅವನು ಈ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧದ ಬಗ್ಗೆ ತಪ್ಪಿತಸ್ಥನಾಗುವುದಿಲ್ಲ.

(ಬಿ) "ಪರಿತೋಷ" : "ಪರಿತೋಷ" ಎಂಬ ಪದವನ್ನು ಆರ್ಥಿಕ ಪರಿತೋಷಗಳಿಗೆ ಅಥವಾ ಹಣದಲ್ಲಿ ಅಂದಾಜು ಮಾಡಬಹುದಾದ ಪರಿತೋಷಗಳಿಗೆ ಸೀಮಿತಗೊಳಿಸಿಲ್ಲ.

(ಸಿ) "ಕಾನೂನು ಸಮ್ಮತ ಪರಿಶ್ರಮಧನ" : "ಕಾನೂನು ಸಮ್ಮತ ಪರಿಶ್ರಮಧನ" ಎಂಬ ಪದಗಳನ್ನು ಲೋಕನೌಕರನು ಕಾನೂನು ಸಮ್ಮತವಾಗಿ ತಗಾದೆ ಮಾಡಬಹುದಾದಂಥ ಪರಿಶ್ರಮಧನಕ್ಕೆ ಸೀಮಿತಗೊಳಿಸಿಲ್ಲ, ಆದರೆ ಅದು ಅವನು ಸೇವೆ ಸಲ್ಲಿಸುತ್ತಿರುವ ಸರ್ಕಾರ ಅಥವಾ ಸಂಸ್ಥೆಯು ಅಂಗೀಕರಿಸಲು ಅನುಮತಿಸಿರುವಂಥ ಎಲ್ಲಾ ಪರಿಶ್ರಮಧನವನ್ನು ಒಳಗೊಳ್ಳುತ್ತದೆ.

(ಡಿ) "ಮಾಡುವುದಕ್ಕಾಗಿನ ಉದ್ದೇಶ ಅಥವಾ ಬಹುಮಾನ": ಯಾವುದನ್ನು ಅವನು ಮಾಡಲು ಉದ್ದೇಶಿಸಿರುವುದಿಲ್ಲವೋ ಅಥವಾ ಮಾಡುವ ಸ್ಥಿತಿಯಲ್ಲಿ ಇಲ್ಲವೋ ಅಥವಾ ಮಾಡಿಲ್ಲವೋ ಅದನ್ನು ಮಾಡುವುದಕ್ಕಾಗಿನ ಉದ್ದೇಶ ಅಥವಾ ಬಹುಮಾನವೆಂದು ಪರಿತೋಷವನ್ನು ಸ್ವೀಕರಿಸುವ ವ್ಯಕ್ತಿಯು ಈ ಪದಾವಳಿಯೊಳಗೆ ಬರುತ್ತಾನೆ.

(ಇ) ಲೋಕನೌಕರನು, ಸರ್ಕಾರದೊಂದಿಗಿನ ತನ್ನ ಪ್ರಭಾವವು ಒಬ್ಬ ವ್ಯಕ್ತಿಗೆ ಹಕ್ಕನ್ನು ತಂದುಕೊಟ್ಟಿದೆ ಎಂದು ಆ ವ್ಯಕ್ತಿಯು ತಪ್ಪು ಗ್ರಹಿಕೆಯಿಂದ ನಂಬಲು ಪ್ರೇರೇಪಿಸುವಲ್ಲಿ ಮತ್ತು ಹಾಗೆ ಆ ಲೋಕನೌಕರನಿಗೆ ಈ ಸೇವೆಗಾಗಿ ಬಹುಮಾನವೆಂದು ಅಥವಾ ಯಾವುದೇ ಇತರ ಪರಿತೋಷವನ್ನು ಕೊಡಲು ಆ ವ್ಯಕ್ತಿಯನ್ನು ಪ್ರೇರೇಪಿಸುವಲ್ಲಿ, ಆ ಲೋಕನೌಕರನು ಈ ಪ್ರಕರಣದ ಮೇರೆಗಿನ ಅಪರಾಧವನ್ನು ಮಾಡಿರುತ್ತಾನೆ.

**8. ಭ್ರಷ್ಟ ಅಥವಾ ಕಾನೂನು ಬಾಹಿರ ವಿಧಾನದ ಮೂಲಕ ಲೋಕನೌಕರನ ಮೇಲೆ ಪ್ರಭಾವ ಬೀರಲು ಪರಿತೋಷವನ್ನು ತೆಗೆದುಕೊಳ್ಳುವುದು.**- ಯಾರೇ ಆಗಲಿ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸಂಸತ್ತು ಅಥವಾ ಯಾವುದೇ ರಾಜ್ಯದ ವಿಧಾನಮಂಡಲದೊಂದಿಗೆ ಅಥವಾ 2ನೇ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮ ಅಥವಾ ಸರ್ಕಾರಿ ಕಂಪನಿಯೊಂದಿಗೆ ಅಥವಾ ಹೆಸರಿಸಿರಲಿ ಅಥವಾ ಅನ್ಯಥಾ ಯಾವನೇ ಲೋಕ ನೌಕರನೊಂದಿಗೆ ಯಾವುದೇ ಪದೀಯ ಕಾರ್ಯವನ್ನು ಮಾಡಲು ಅಥವಾ ಅದನ್ನು ಮಾಡದಿರಲು ಅಥವಾ ಅಂಥ ಲೋಕನೌಕರನ ಪದೀಯ ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ ಯಾವನೇ ವ್ಯಕ್ತಿಗೆ ಪಕ್ಷಪಾತ ಅಥವಾ ಅನಾದರಣೆಯನ್ನು ತೋರಿಸಲು ಅಥವಾ ಯಾವನೇ ವ್ಯಕ್ತಿಗೆ ಯಾವುದೇ ಸೇವೆ ಅಥವಾ ಅಪಕಾರವನ್ನು ಮಾಡಲು ಅಥವಾ ಮಾಡಲು ಪ್ರಯತ್ನಿಸಲು ಭ್ರಷ್ಟ ಅಥವಾ ಕಾನೂನು ಬಾಹಿರ ವಿಧಾನದ ಮೂಲಕ ಯಾವನೇ ಲೋಕನೌಕರನನ್ನು ಪ್ರೇರೇಪಿಸುವುದಕ್ಕಾಗಿನ ಉದ್ದೇಶ ಅಥವಾ ಬಹುಮಾನವೆಂದು ಯಾವುದೇ ಸ್ವರೂಪದ ಪರಿತೋಷವನ್ನು ಯಾವನೇ ವ್ಯಕ್ತಿಯಿಂದ ತನಗಾಗಿಯೇ ಆಗಲಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಆಗಲಿ ಅಂಗೀಕರಿಸಿದರೆ ಅಥವಾ ಪಡೆದುಕೊಂಡರೆ ಅಥವಾ ಅಂಗೀಕರಿಸಲು ಒಪ್ಪಿಕೊಂಡರೆ ಅಥವಾ ಪಡೆಯಲು ಪ್ರಯತ್ನಿಸಿದರೆ ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**9. ಲೋಕನೌಕರನೊಂದಿಗೆ ವೈಯಕ್ತಿಕ ಪ್ರಭಾವವನ್ನು ಬೀರುವುದಕ್ಕಾಗಿ ಪರಿತೋಷವನ್ನು ತೆಗೆದುಕೊಳ್ಳುವುದು.**- ಯಾರೇ ಆಗಲಿ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸಂಸತ್ತು ಅಥವಾ ಯಾವುದೇ ರಾಜ್ಯದ ವಿಧಾನ ಮಂಡಲದೊಂದಿಗೆ ಅಥವಾ 2ನೇ ಪ್ರಕರಣದ (3)ನೇ ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮ ಅಥವಾ ಸರ್ಕಾರಿ ಕಂಪನಿಯೊಂದಿಗೆ ಅಥವಾ ಹೆಸರಿಸಿರಲಿ ಅಥವಾ ಅನ್ಯಥಾವಾಗಿರಲಿ ಯಾವನೇ ಲೋಕ ನೌಕರನೊಂದಿಗೆ, ಯಾವುದೇ ಪದೀಯ ಕಾರ್ಯವನ್ನು ಮಾಡಲು ಅಥವಾ ಅದನ್ನು ಮಾಡದಿರಲು ಅಥವಾ ಅಂಥ ಲೋಕನೌಕರನ ಪದೀಯ ಪ್ರಕಾರ್ಯಗಳನ್ನು ಚಲಾಯಿಸಿ ಯಾವನೇ ವ್ಯಕ್ತಿಗೆ ಪಕ್ಷಪಾತ ಅಥವಾ ಅನಾದರಣೆಯನ್ನು ತೋರಿಸಲು ಅಥವಾ ಯಾವನೇ ವ್ಯಕ್ತಿಗೆ ಯಾವುದೇ ಸೇವೆ ಅಥವಾ ಅಪಕಾರವನ್ನು ಮಾಡಲು ಅಥವಾ ಮಾಡಲು ಪ್ರಯತ್ನಿಸಲು ವೈಯಕ್ತಿಕ ಪ್ರಭಾವವನ್ನು ಬೀರುವ ಮೂಲಕ, ಹೆಸರಿಸಿರಲಿ ಅಥವಾ ಅನ್ಯಥಾ ಯಾವನೇ ಲೋಕನೌಕರನನ್ನು ಪ್ರೇರೇಪಿಸುವುದಕ್ಕಾಗಿ ಉದ್ದೇಶ ಅಥವಾ ಬಹುಮಾನವೆಂದು ಯಾವುದೇ ಸ್ವರೂಪದ ಪರಿತೋಷವನ್ನು ಯಾವನೇ ವ್ಯಕ್ತಿಯಿಂದ ಅವನಿಗಾಗಿಯೇ ಆಗಲಿ ಅಥವಾ ಯಾವನೇ ಇತರ ವ್ಯಕ್ತಿಗಾಗಿಯೇ ಆಗಲಿ ಅಂಗೀಕರಿಸಿದರೆ ಅಥವಾ

ಪಡೆದುಕೊಂಡರೆ ಅಥವಾ ಅಂಗೀಕರಿಸಲು ಒಪ್ಪಿಕೊಂಡರೆ ಅಥವಾ ಪಡೆಯಲು ಪ್ರಯತ್ನಿಸಿದರೆ, ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**10. 8 ಅಥವಾ 9ನೇ ಪ್ರಕರಣಗಳಲ್ಲಿ ಪರಿಭಾಷಿಸಿರುವ ಅಪರಾಧಗಳನ್ನು ಲೋಕನೌಕರನು ದುಷ್ಪ್ರೇರಿಸುವುದಕ್ಕಾಗಿ ದಂಡನೆ.**– ಯಾರಿಗೆ ಸಂಬಂಧಿಸಿದಂತೆ 8ನೇ ಪ್ರಕರಣ ಅಥವಾ 9ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಯಾವುದೇ ಅಪರಾಧವನ್ನು ಮಾಡಲಾಗಿದೆಯೋ ಆ ಲೋಕನೌಕರನಾಗಿರುವ ಯಾರೇ ಆಗಲಿ ಅಪರಾಧವನ್ನು ದುಷ್ಪ್ರೇರಿಸಿದರೆ, ಆ ದುಷ್ಪ್ರೇರಣೆಯ ಪರಿಣಾಮದಿಂದಾಗಿ ಆ ಅಪರಾಧವನ್ನು ಮಾಡಿರಲಿ ಅಥವಾ ಮಾಡಿಲ್ಲದೇ ಇರಲಿ, ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**11. ಲೋಕನೌಕರನ ವ್ಯವಹರಣೆಯಲ್ಲಿ ಅಥವಾ ಅವನು ನಡೆಸಿದ ವ್ಯವಹಾರದಲ್ಲಿ ಸಂಬಂಧಪಟ್ಟ ವ್ಯಕ್ತಿಯಿಂದ ಪ್ರತಿಫಲವಿಲ್ಲದೆ ಬೆಲೆಬಾಳುವ ವಸ್ತುವನ್ನು ಅಂಥ ಲೋಕನೌಕರನು ಪಡೆದುಕೊಳ್ಳುವುದು.**– ಲೋಕನೌಕರನಾಗಿರುವ ಯಾರೇ ಆಗಲಿ, ಯಾರನ್ನು ಅವನು ಅಂಥ ಲೋಕನೌಕರನ ಯಾವುದೇ ವ್ಯವಹರಣೆಯಲ್ಲಿ ಅಥವಾ ಅವನು ನಡೆಸಿದ ಅಥವಾ ಇನ್ನೇನು ನಡೆಸಬೇಕಾದ ವ್ಯವಹಾರದಲ್ಲಿ ಸಂಬಂಧಪಟ್ಟಿರುವನೆಂದು ಅಥವಾ ಸಂಬಂಧಪಡುವನೆಂದು ಅಥವಾ ಸಂಬಂಧಪಡುವ ಸಂಭವವಿರುವುದೆಂದು ಅಥವಾ ಅವನ ಅಥವಾ ಅವನು ಅಧೀನನಾಗಿರುವ ಯಾವನೇ ಲೋಕ ನೌಕರನ ಪದೀಯ ಪ್ರಕಾರ್ಯಗಳಲ್ಲಿ ಯಾವುದೇ ಸಂಬಂಧವನ್ನು ಹೊಂದಿರುವನೆಂದು, ಅವನಿಗೆ ಗೊತ್ತಿರುವ ಯಾವನೇ ವ್ಯಕ್ತಿಯಿಂದ ಅಥವಾ ಹಾಗೆ ಸಂಬಂಧಪಟ್ಟ ವ್ಯಕ್ತಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಅಥವಾ ಅವನಿಗೆ ಸಂಬಂಧಪಟ್ಟಿರುವುದಾಗಿ ಅವನಿಗೆ ಗೊತ್ತಿರುವ ಯಾವನೇ ವ್ಯಕ್ತಿಯಿಂದ ತನಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಪ್ರತಿಫಲವಿಲ್ಲದೆ (ಬೆಲೆ ನೀಡದೆ) ಅಥವಾ ಸಾಕಷ್ಟಿಲ್ಲವೆಂದು ಅವನಿಗೆ ಗೊತ್ತಿರುವಂಥ ಪ್ರತಿಫಲಕ್ಕಾಗಿ (ಬೆಲೆ ನೀಡಿ), ಯಾವುದೇ ಬೆಲೆಯುಳ್ಳ ವಸ್ತುವನ್ನು ಅಂಗೀಕರಿಸಿದರೆ ಅಥವಾ ಪಡೆದುಕೊಂಡರೆ ಅಥವಾ ಅಂಗೀಕರಿಸಲು ಒಪ್ಪಿಕೊಂಡರೆ ಅಥವಾ ಪಡೆಯಲು ಪ್ರಯತ್ನಿಸಿದರೆ, ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**12. 7 ಅಥವಾ 11ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ.**– ಯಾರೇ ಆಗಲಿ 7ನೇ ಪ್ರಕರಣ ಅಥವಾ 11ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ದುಷ್ಪ್ರೇರಿಸಿದರೆ, ಆ ಅಪರಾಧವನ್ನು ಆ ದುಷ್ಪ್ರೇರಣೆಯ ಪರಿಣಾಮದಿಂದಾಗಿ ಮಾಡಿರಲಿ ಅಥವಾ ಮಾಡಿಲ್ಲದೆ ಇರಲಿ ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**13. ಲೋಕ ನೌಕರನಿಂದ ಆಪರಾಧಿಕ ದುರ್ನಡತೆ.**– (1) ಲೋಕನೌಕರನು,–

(ಎ) ಅವನು, 7ನೇ ಪ್ರಕರಣದಲ್ಲಿ ನಮೂದಿಸಲಾಗಿರುವಂಥ ಉದ್ದೇಶ ಅಥವಾ ಬಹುಮಾನವೆಂದು ಕಾನೂನು ಸಮ್ಮತ ಪರಿಶ್ರಮಧನವನ್ನು ಹೊರತುಪಡಿಸಿ ಯಾವುದೇ ಪರಿತೋಷವನ್ನು ಅವನಿಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಯಾವನೇ ವ್ಯಕ್ತಿಯಿಂದ ರೂಢಿಗತವಾಗಿ ಅಂಗೀಕರಿಸಿದರೆ ಅಥವಾ ಪಡೆದುಕೊಂಡರೆ ಅಥವಾ ಅಂಗೀಕರಿಸಲು ಒಪ್ಪಿಕೊಂಡರೆ ಅಥವಾ ಪಡೆಯಲು ಪ್ರಯತ್ನಿಸಿದರೆ; ಅಥವಾ

(ಬಿ) ಅವನು ಯಾರನ್ನು, ಯಾವುದೇ ವ್ಯವಹರಣೆಯಲ್ಲಿ ಅಥವಾ ಅವನು ನಡೆಸಿದ ಅಥವಾ ಇನ್ನೇನು ನಡೆಸಬೇಕಾಗಿರುವ ವ್ಯವಹಾರದಲ್ಲಿ ಸಂಬಂಧಪಟ್ಟಿರುವನೆಂದು ಅಥವಾ ಸಂಬಂಧ ಪಡುವನೆಂದು ಅಥವಾ ಸಂಬಂಧ ಪಡುವ ಸಂಭವವಿರುವುದೆಂದು ಅಥವಾ ಅವನ ಅಥವಾ ಅವನು ಅಧೀನನಾಗಿರುವ ಯಾವನೇ ಲೋಕನೌಕರನ ಪದೀಯ ಪ್ರಕಾರ್ಯಗಳಲ್ಲಿ ಯಾವುದೇ ಸಂಬಂಧವನ್ನು ಹೊಂದಿರುವನೆಂದು, ಅವನಿಗೆ ಗೊತ್ತಿರುವ ಯಾವನೇ ವ್ಯಕ್ತಿಯಿಂದ ಅಥವಾ ಹಾಗೆ ಸಂಬಂಧವನ್ನು

ಹೊಂದಿರುವ ವ್ಯಕ್ತಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವನೆಂದು ಅಥವಾ ಅವನಿಗೆ ಸಂಬಂಧಪಟ್ಟವನೆಂದು ಅವನಿಗೆ ಗೊತ್ತಿರುವ ಯಾವನೇ ವ್ಯಕ್ತಿಯಿಂದ ಪ್ರತಿಫಲವಿಲ್ಲದೆ (ಬೆಲೆ ನೀಡದೆ) ಅಥವಾ ಸಾಕಷ್ಟಿಲ್ಲವೆಂದು ಅವನಿಗೆ ಗೊತ್ತಿರುವಂಥ ಪ್ರತಿಫಲಕ್ಕಾಗಿ (ಬೆಲೆ ನೀಡಿ) ಯಾವುದೇ ಬೆಲೆಯುಳ್ಳ ವಸ್ತುವನ್ನು ರೂಢಿಗತವಾಗಿ ಅಂಗೀಕರಿಸಿದರೆ, ಅಥವಾ ಪಡೆದುಕೊಂಡರೆ ಅಥವಾ ಅಂಗೀಕರಿಸಲು ಒಪ್ಪಿಕೊಂಡರೆ ಅಥವಾ ಪಡೆಯಲು ಪ್ರಯತ್ನಿಸಿದರೆ ; ಅಥವಾ

(ಸಿ) ಅವನು ಲೋಕನೌಕರನೆಂದು ಅವನಿಗೆ ವಹಿಸಿಕೊಟ್ಟಿರುವ ಅಥವಾ ಅವನ ನಿಯಂತ್ರಣದಲ್ಲಿರುವ ಯಾವುದೇ ಸ್ವತ್ತನ್ನು ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ದುರುಪಯೋಗಪಡಿಸಿಕೊಂಡರೆ ಅಥವಾ ಅನ್ಯಥಾ ಅವನ ಸ್ವಂತ ಉಪಯೋಗಕ್ಕಾಗಿ ಪರಿವರ್ತಿಸಿಕೊಂಡರೆ ಅಥವಾ ಹಾಗೆ ಮಾಡಲು ಯಾವನೇ ಇತರ ವ್ಯಕ್ತಿಗೆ ಅವಕಾಶ ಮಾಡಿಕೊಟ್ಟರೆ; ಅಥವಾ

(ಡಿ) ಅವನು,-

(i) ಭ್ರಷ್ಟ ಅಥವಾ ಕಾನೂನು ಬಾಹಿರ ಸಾಧನದ ಮೂಲಕ ಯಾವುದೇ ಬೆಲೆಯುಳ್ಳ ವಸ್ತು ಅಥವಾ ಆರ್ಥಿಕ ಪ್ರಯೋಜನವನ್ನು ಅವನಿಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಪಡೆದುಕೊಂಡರೆ; ಅಥವಾ

(ii) ಲೋಕನೌಕರನಾಗಿ ಅವನ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ಯಾವುದೇ ಬೆಲೆಯುಳ್ಳ ವಸ್ತು ಅಥವಾ ಆರ್ಥಿಕ ಪ್ರಯೋಜನವನ್ನು ಅವನಿಗಾಗಿ ಅಥವಾ ಇತರ ಯಾವನೇ ವ್ಯಕ್ತಿಗಾಗಿ ಪಡೆದುಕೊಂಡರೆ; ಅಥವಾ

(iii) ಲೋಕನೌಕರನೆಂದು ಪದವನ್ನು ಧಾರಣ ಮಾಡಿರುವಾಗ ಯಾವುದೇ ಸಾರ್ವಜನಿಕ ಹಿತಾಸಕ್ತಿಯಿಲ್ಲದೆ ಯಾವುದೇ ಬೆಲೆಯುಳ್ಳ ವಸ್ತು ಅಥವಾ ಆರ್ಥಿಕ ಪ್ರಯೋಜನವನ್ನು ಯಾವನೇ ವ್ಯಕ್ತಿಗಾಗಿ ಪಡೆದುಕೊಂಡರೆ; ಅಥವಾ

(ಇ) ಆ ಲೋಕನೌಕರನು ತೃಪ್ತಿಕರವಾಗಿ ಲೆಕ್ಕವನ್ನು ಕೊಡಲು ಆಗದ, ಅವನ ಗೊತ್ತಿರುವ ಆದಾಯ ಮೂಲಗಳಿಗೆ ಅಸಮ ಪ್ರಮಾಣದ ಆರ್ಥಿಕ ಸಂಪನ್ಮೂಲಗಳು ಅಥವಾ ಸ್ವತ್ತನ್ನು ಅವನು ಅಥವಾ ಅವನ ಪರವಾಗಿ ಯಾವನೇ ವ್ಯಕ್ತಿಯು ಹೊಂದಿದ್ದರೆ ಅಥವಾ ಅವನ ಪದಾವಧಿಯಲ್ಲಿ ಯಾವುದೇ ಕಾಲದಲ್ಲಿ ಹೊಂದಿದ್ದರೆ

– ಆಪರಾಧಿಕ ದುರ್ನಡತೆಯ ಅಪರಾಧವನ್ನು ಮಾಡಿರುತ್ತಾನೆಂದು ಹೇಳಲಾಗುತ್ತದೆ.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ "ಆದಾಯದ ಗೊತ್ತಿರುವ ಮೂಲಗಳು " ಎಂದರೆ ಯಾವುದೇ ಕಾನೂನು ಸಮ್ಮತ ಮೂಲಗಳಿಂದ ಸ್ವೀಕರಿಸಿದ ಮತ್ತು ಅಂಥ ಸ್ವೀಕೃತಿಯನ್ನು ಲೋಕ ನೌಕರನಿಗೆ ತತ್ಕಾಲದಲ್ಲಿ ಅನ್ವಯವಾಗಬಹುದಾದ ಯಾವುದೇ ಕಾನೂನು, ನಿಯಮಗಳು ಅಥವಾ ಆದೇಶಗಳ ಉಪಬಂಧಗಳಿಗನುಸಾರವಾಗಿ ತಿಳಿಯಪಡಿಸಿರುವ ಆದಾಯ.

(2) ಆಪರಾಧಿಕ ದುರ್ನಡತೆಯನ್ನು ಮಾಡುವ ಯಾವನೇ ಲೋಕನೌಕರನು ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**14. 8, 9 ಮತ್ತು 12ನೇ ಪ್ರಕರಣಗಳ ಮೇರೆಗಿನ ಅಪರಾಧವನ್ನು ರೂಢಿಗತವಾಗಿ ಮಾಡುವುದು.-** ಯಾರೇ ಆಗಲಿ,-

(ಎ) 8ನೇ ಪ್ರಕರಣ ಅಥವಾ 9ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು; ಅಥವಾ

(ಬಿ) 12ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿದರೆ,

ಅವನು ಎರಡು ವರ್ಷಗಳಿಗಿಂತ ಕಡಿಮೆಯಾಗಿರದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು.

**15. ಪ್ರಯತ್ನಕ್ಕಾಗಿ ದಂಡ.**- ಯಾರೇ ಆಗಲಿ 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ) ಖಂಡ ಅಥವಾ (ಡಿ) ಖಂಡದಲ್ಲಿ ಉಲ್ಲೇಖಿಸಿದ ಅಪರಾಧವನ್ನು ಮಾಡಲು ಪ್ರಯತ್ನಿಸಿದರೆ, ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

**16. ಜುಲ್ಮಾನೆಯನ್ನು ನಿಗದಿಪಡಿಸುವುದಕ್ಕಾಗಿ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ವಿಷಯಗಳು.**- 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಥವಾ 14ನೇ ಪ್ರಕರಣದ ಮೇರೆಗೆ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವಲ್ಲಿ ನ್ಯಾಯಾಲಯವು ಆ ಜುಲ್ಮಾನೆಯ ಮೊಬಲಗನ್ನು ನಿಗದಿಪಡಿಸುವಾಗ, ಆಪಾದಿತ ವ್ಯಕ್ತಿಯು ಆ ಅಪರಾಧವನ್ನು ಮಾಡುವ ಮೂಲಕ ಪಡೆದುಕೊಂಡಿರುವಂಥ ಸ್ವತ್ತು ಯಾವುದಾದರೂ ಇದ್ದರೆ ಅದರ ಮೊಬಲಗು ಅಥವಾ ಮೌಲ್ಯವನ್ನು ಅಥವಾ ಆ ಅಪರಾಧ ನಿರ್ಣಯವು 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಲಾದ ಅಪರಾಧಕ್ಕಾಗಿ ಇರುವಲ್ಲಿ ಆ ಖಂಡದಲ್ಲಿ ಉಲ್ಲೇಖಿಸಲಾದ ಯಾವುದರ ಬಗ್ಗೆ ಆಪಾದಿತ ವ್ಯಕ್ತಿಯು ತೃಪ್ತಿಕರವಾಗಿ ಲೆಕ್ಕ ಕೊಡಲು ಅಸಮರ್ಥನಾಗಿರುವನೋ ಆ ಆರ್ಥಿಕ ಸಂಪನ್ಮೂಲಗಳು ಅಥವಾ ಸ್ವತ್ತನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕುದು.

## ಅಧ್ಯಾಯ - IV

## ಈ ಅಧಿನಿಯಮದ ಮೇರೆಗಿನ ಪ್ರಕರಣಗಳ ಬಗ್ಗೆ ತನಿಖೆ

**17. ತನಿಖೆ ನಡೆಸಲು ಅಧಿಕೃತಗೊಳಿಸಿರುವ ವ್ಯಕ್ತಿಗಳು.**- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ಇದರಲ್ಲಿ ಏನೇ ಅಡಕವಾಗಿದ್ದಾಗ್ಯೂ,-

(ಎ) ದೆಹಲಿ ವಿಶೇಷ ಪೊಲೀಸು ಸ್ಥಾಪನೆಯ ಸಂದರ್ಭದಲ್ಲಿ ಪೊಲೀಸು ಇನ್ಸ್‌ಪೆಕ್ಟರನ;

(ಬಿ) ಮುಂಬಯಿ, ಕಲ್ಕತ್ತ, ಮದ್ರಾಸ್ ಮತ್ತು ಅಹಮದಾಬಾದ್ ಇವುಗಳ ಮಹಾನಗರ ಪ್ರದೇಶಗಳಲ್ಲಿ ಮತ್ತು ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ಇದರ 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹಾಗೆಂದು ಅಧಿಸೂಚಿಸಿರುವ ಯಾವುದೇ ಇತರ ಮಹಾನಗರ ಪ್ರದೇಶದಲ್ಲಿ, ಪೊಲೀಸು ಅಸಿಸ್ಟೆಂಟ್ ಕಮಿಷನರ್‌ನ;

(ಸಿ) ಬೇರೆ ಕಡೆ, ಪೊಲೀಸು ಡೆಪ್ಯುಟಿ ಸೂಪರಿಂಟೆಂಡೆಂಟನ ಅಥವಾ ಅದಕ್ಕೆ ಸಮನಾದ ದರ್ಜೆಯ ಪೊಲೀಸು ಅಧಿಕಾರಿಯ

- ದರ್ಜೆಗೆ ಕೆಳಗಿನ ದರ್ಜೆಯ ಯಾವನೇ ಪೊಲೀಸು ಅಧಿಕಾರಿಯು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಸಂದರ್ಭಾನುಸಾರ, ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ತನಿಖೆ ನಡೆಸತಕ್ಕುದಲ್ಲ ಅಥವಾ ಅದಕ್ಕಾಗಿ ವಾರೆಂಟಿಲ್ಲದೆ ದಸ್ತಗಿರಿ ಮಾಡತಕ್ಕುದಲ್ಲ:

ಪರಂತು, ಪೊಲೀಸು ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಿಲ್ಲದ ಪೊಲೀಸು ಅಧಿಕಾರಿಯನ್ನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ್ದರೆ ಅವನೂ ಸಹ ಸಂದರ್ಭಾನುಸಾರ, ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ಯಾವುದೇ ಅಂಥ ಅಪರಾಧದ ಬಗ್ಗೆ ತನಿಖೆಯನ್ನು ನಡೆಸಬಹುದು, ಅಥವಾ ತನಿಖೆಗಾಗಿ ವಾರೆಂಟಿಲ್ಲದೆ ದಸ್ತಗಿರಿ ಮಾಡಬಹುದು:

ಮತ್ತೂ ಪರಂತು, 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಿರುವ ಅಪರಾಧವನ್ನು ಪೊಲೀಸು ಸೂಪರಿಂಟೆಂಡೆಂಟನ ದರ್ಜೆಗೆ ಕಡಿಮೆಯಿಲ್ಲದ ಪೊಲೀಸು ಅಧಿಕಾರಿಯ ಆದೇಶವಿಲ್ಲದ ತನಿಖೆ ನಡೆಸತಕ್ಕುದಲ್ಲ.

**18. ಬ್ಯಾಂಕರುಗಳ ಪುಸ್ತಕಗಳನ್ನು ಪರಿಶೀಲಿಸುವ ಅಧಿಕಾರ.**- ಸ್ವೀಕರಿಸಿದ ಮಾಹಿತಿಯಿಂದ ಅಥವಾ ಅನ್ಯಥಾ ಪೊಲೀಸು ಅಧಿಕಾರಿಗೆ, 17ನೇ ಪ್ರಕರಣದ ಮೇರೆಗೆ ತನಿಖೆ ನಡೆಸಲು ಅವನನ್ನು ಶಕ್ತಗೊಳಿಸಿರುವಂಥ ಅಪರಾಧವನ್ನು ಮಾಡಿರುವ ಬಗ್ಗೆ ಶಂಕಿಸಲು ಕಾರಣವಿದ್ದರೆ ಮತ್ತು ಅವನು ಅಂಥ ಅಪರಾಧದ ಬಗ್ಗೆ ತನಿಖೆ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಯಾವುದೇ ಬ್ಯಾಂಕರುಗಳ ಪುಸ್ತಕಗಳನ್ನು ಪರಿಶೀಲಿಸುವುದು ಅವಶ್ಯವೆಂದು ಪರ್ಯಾಲೋಚಿಸಿದರೆ, ಆಗ ತತ್ಕಾಲದಲ್ಲಿ

ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅವನು ಯಾವುವೇ ಬ್ಯಾಂಕರುಗಳ ಪುಸ್ತಕಗಳನ್ನು, ಆ ಅಪರಾಧವನ್ನು ಮಾಡಿರುವುದಾಗಿ ಶಂಕಿಸಲಾದ ವ್ಯಕ್ತಿಗಳ ಅಥವಾ ಅಂಥ ವ್ಯಕ್ತಿಯ ಪರವಾಗಿ ಹಣವನ್ನು ಹೊಂದಿರುವನೆಂದು ಶಂಕಿಸಲಾದ ಯಾವನೇ ಇತರ ವ್ಯಕ್ತಿಯ ಲೆಕ್ಕಪತ್ರಗಳಿಗೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಪರಿಶೀಲಿಸಬಹುದು ಮತ್ತು ಅವುಗಳಿಂದ ಸಂಬಂಧಪಟ್ಟ ನಮೂದುಗಳ ಪ್ರಮಾಣೀಕರಿಸಿದ ಪ್ರತಿಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳುವಂತೆ ಮಾಡಬಹುದು ಮತ್ತು ಸಂಬಂಧಪಟ್ಟ ಬ್ಯಾಂಕು, ಈ ಪ್ರಕರಣದ ಮೇರೆಗಿನ ಪೊಲೀಸ್ ಅಧಿಕಾರಿಯು ಅವನ ಅಧಿಕಾರಗಳನ್ನು ಚಲಾಯಿಸುವಲ್ಲಿ ಆ ಅಧಿಕಾರಿಗೆ ಸಹಾಯ ಮಾಡಲು ಬದ್ಧವಾಗಿರತಕ್ಕುದು:

ಪರಂತು, ಯಾವನೇ ವ್ಯಕ್ತಿಯ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ಈ ಪ್ರಕರಣದ ಮೇರೆಗಿನ ಯಾವುದೇ ಅಧಿಕಾರವನ್ನು ಪೊಲೀಸು ಸೂಪರಿಂಟೆಂಡೆಂಟನ ದರ್ಜೆಗಿಂತ ಕೆಳಗಿನ ದರ್ಜೆಯ ಪೊಲೀಸು ಅಧಿಕಾರಿಯು, ಪೊಲೀಸು ಸೂಪರಿಂಟೆಂಡೆಂಟ್‌ನು ಅಥವಾ ಅವನ ದರ್ಜೆಗೆ ಮೇಲ್ಪಟ್ಟ ಪೊಲೀಸು ಅಧಿಕಾರಿಯು ಈ ಬಗ್ಗೆ ಅವನನ್ನು ವಿಶೇಷವಾಗಿ ಅಧಿಕೃತಗೊಳಿಸಿದ್ದ ಹೊರತು ಚಲಾಯಿಸತಕ್ಕುದಲ್ಲ.

**ವಿವರಣೆ:-** ಈ ಪ್ರಕರಣದಲ್ಲಿ "ಬ್ಯಾಂಕು" ಮತ್ತು "ಬ್ಯಾಂಕರುಗಳ ಪುಸ್ತಕಗಳು" ಎಂಬ ಪದಾವಳಿಗಳು, ಬ್ಯಾಂಕರುಗಳ ಪುಸ್ತಕಗಳ ಸಾಕ್ಷ್ಯ ಅಧಿನಿಯಮ, 1891 (1891ರ 18) ಇದರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕುದು.

## ಅಧ್ಯಾಯ - V

## ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಮಂಜೂರಾತಿ ಮತ್ತು ಇತರ ಸಂಕೀರ್ಣ ಉಪಬಂಧಗಳು

**19. ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಪೂರ್ವ ಮಂಜೂರಾತಿಯು ಅವಶ್ಯ.-** (1) ಲೋಕನೌಕರನು ಮಾಡಿರುವನೆಂದು ಹೇಳಲಾದ 7,10,11,13 ಮತ್ತು 15ನೇ ಪ್ರಕರಣಗಳ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಯಾವುದೇ ನ್ಯಾಯಾಲಯವು ಸಂಜ್ಞೇಯತೆಯನ್ನು-

(ಎ) ಒಕ್ಕೂಟದ ವ್ಯವಹಾರಗಳಿಗೆ ಸಂಬಂಧಿಸಿದಂತೆ ನಿಯೋಜಿತನಾಗಿರುವ ಮತ್ತು ಕೇಂದ್ರ ಸರ್ಕಾರದ ಮಂಜೂರಾತಿಯ ಮೂಲಕ ಅಥವಾ ಅದರ ಹೊರತು, ಅವನ ಪದದಿಂದ ತೆಗೆದುಹಾಕಲಾಗದ ವ್ಯಕ್ತಿಯ ಸಂದರ್ಭದಲ್ಲಿ ಆ ಸರ್ಕಾರದ;

(ಬಿ) ಒಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ ನಿಯೋಜಿತನಾಗಿರುವ ಮತ್ತು ಆ ರಾಜ್ಯ ಸರ್ಕಾರದ ಮಂಜೂರಾತಿಯ ಮೂಲಕ ಅಥವಾ ಅದರ ಹೊರತು, ಅವನ ಪದದಿಂದ ತೆಗೆದುಹಾಕಲಾಗದ ವ್ಯಕ್ತಿಯ ಸಂದರ್ಭದಲ್ಲಿ, ಆ ಸರ್ಕಾರದ;

(ಸಿ) ಯಾವನೇ ಇತರ ವ್ಯಕ್ತಿಯ ಸಂದರ್ಭದಲ್ಲಿ, ಅವನ ಪದದಿಂದ ಅವನನ್ನು ತೆಗೆದುಹಾಕಲು ಸಕ್ಷಮವಾದ ಪ್ರಾಧಿಕಾರದ

- ಪೂರ್ವ ಮಂಜೂರಾತಿಯನ್ನು ಪಡೆದ ಹೊರತು, ತೆಗೆದುಕೊಳ್ಳತಕ್ಕುದಲ್ಲ.

(2) ಯಾವುದೇ ಕಾರಣಕ್ಕಾಗಿ (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಲಾದ ಪೂರ್ವ ಮಂಜೂರಾತಿಯನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರ ಅಥವಾ ಯಾವುದೇ ಇತರ ಪ್ರಾಧಿಕಾರವು ಕೊಡಬೇಕೋ ಹೇಗೆ ಎಂಬ ಬಗ್ಗೆ ಯಾವುದೇ ಸಂದೇಹವು ಉದ್ಭವಿಸುವಲ್ಲಿ, ಅಂಥ ಮಂಜೂರಾತಿಯನ್ನು, ಆ ಅಪರಾಧವನ್ನು ಮಾಡಲಾಗಿತ್ತೆಂದು ಹೇಳಲಾದ ಕಾಲದಲ್ಲಿ ಆ ಲೋಕ ನೌಕರನನ್ನು ಅವನ ಪದದಿಂದ ತೆಗೆದುಹಾಕಲು ಸಕ್ಷಮವಾಗಿದ್ದಂಥ ಆ ಸರ್ಕಾರ ಅಥವಾ ಪ್ರಾಧಿಕಾರವು ಕೊಡತಕ್ಕುದು.

(3) ದಂಡಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಅಡಕವಾಗಿದ್ದಾಗ್ಯೂ-

(ಎ) ವಿಶೇಷ ನ್ಯಾಯಾಧೀಶನು ಮಾಡಿದ ಯಾವುದೇ ನಿರ್ಣಯ, ಶಿಕ್ಷೆಯ ಆದೇಶ ಅಥವಾ ಆದೇಶವನ್ನು ನ್ಯಾಯಾಲಯವು, (1)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದ ಮಂಜೂರಾತಿಯಿಲ್ಲವೆಂಬ ಅಥವಾ ಅದರಲ್ಲಿ ಯಾವುದೇ ತಪ್ಪು, ಲೋಪ ಅಥವಾ ಕ್ರಮ ದೋಷ ಇದೆಯೆಂಬ ಕಾರಣದ ಮೇಲೆ ಅಪೀಲು, ಸ್ಥಿರೀಕರಣ ಅಥವಾ ಪುನರೀಕ್ಷಣೆಯಲ್ಲಿ, ಆ ನ್ಯಾಯಾಲಯದ

ಅಭಿಪ್ರಾಯದಲ್ಲಿ ಅದರಿಂದಾಗಿ ವಾಸ್ತವವಾಗಿ ನ್ಯಾಯ ವಿಫಲತೆಯು ಉಂಟಾಗಿದ್ದ ಹೊರತು ವಿಪರ್ಯಯಗೊಳಿಸತಕ್ಕುದಲ್ಲ ಅಥವಾ ಬದಲಾಯಿಸತಕ್ಕುದಲ್ಲ;

(ಬಿ) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳನ್ನು ಆ ಪ್ರಾಧಿಕಾರವು ಕೊಟ್ಟ ಮಂಜೂರಾತಿಯಲ್ಲಿ ಯಾವುದೇ ತಪ್ಪು, ಲೋಪ ಅಥವಾ ಕ್ರಮದೋಷ ಇದೆಯೆಂಬ ಕಾರಣದ ಮೇಲೆ, ಆ ನ್ಯಾಯಾಲಯದ ಅಭಿಪ್ರಾಯದಲ್ಲಿ ಅದರಿಂದಾಗಿ ವಾಸ್ತವವಾಗಿ ನ್ಯಾಯವಿಫಲತೆ ಉಂಟಾಗಿದ್ದ ಹೊರತು ತಡೆಹಿಡಿಯತಕ್ಕುದಲ್ಲ;

(ಸಿ) ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳನ್ನು ಯಾವುದೇ ಇತರ ಕಾರಣದ ಮೇಲೆ ತಡೆಹಿಡಿಯತಕ್ಕುದಲ್ಲ ಮತ್ತು ಯಾವುದೇ ನ್ಯಾಯಾಲಯವು ಯಾವುದೇ ವಿಚಾರಣೆ, ಅಧಿವಿಚಾರಣೆ, ಅಪೀಲು ಅಥವಾ ಇತರ ವ್ಯವಹರಣೆಗಳಲ್ಲಿ ಮಾಡಿದ ಯಾವುದೇ ವಾದಕಾಲೀನ ಆದೇಶಕ್ಕೆ ಸಂಬಂಧಪಟ್ಟಂತೆ ಪುನರೀಕ್ಷಣೆಯ ಅಧಿಕಾರಗಳನ್ನು ಚಲಾಯಿಸತಕ್ಕುದಲ್ಲ.

(4) (3)ನೇ ಉಪಪ್ರಕರಣದ ಮೇರೆಗೆ ಅಂಥ ಮಂಜೂರಾತಿ ಇಲ್ಲದೆ ಇರುವುದರಿಂದ ಅಥವಾ ಅದರಲ್ಲಿನ ಯಾವುದೇ ತಪ್ಪು, ಲೋಪ ಅಥವಾ ಕ್ರಮದೋಷದಿಂದಾಗಿ ನ್ಯಾಯವಿಫಲತೆಯು ಉಂಟಾಗಿದೆಯೇ ಅಥವಾ ಪರಿಣಮಿಸಿದೆಯೇ ಹೇಗೆ ಎಂಬುದನ್ನು ನಿರ್ಧರಿಸುವಲ್ಲಿ ನ್ಯಾಯಾಲಯವು, ಆ ಆಕ್ಷೇಪಣೆಯನ್ನು ಆ ವ್ಯವಹರಣೆಗಳಲ್ಲಿನ ಯಾವುದೇ ಮುಂಚಿನ ಹಂತದಲ್ಲಿ ಎತ್ತಬಹುದಾಗಿದ್ದಿತೇ ಅಥವಾ ಎತ್ತಬೇಕಾಗಿತ್ತೇ ಹೇಗೆ ಎಂಬ ಸಂಗತಿಯ ಬಗ್ಗೆ ಗಮನವನ್ನು ಕೊಡತಕ್ಕುದು.

**ವಿವರಣೆ:**- ಈ ಪ್ರಕರಣದ ಉದ್ದೇಶಕ್ಕಾಗಿ-

(ಎ) ತಪ್ಪು ಎಂಬುದು ಮಂಜೂರಾತಿಯನ್ನು ಕೊಡುವ ಪ್ರಾಧಿಕಾರದ ಸಕ್ಷಮತೆಯನ್ನು ಒಳಗೊಳ್ಳುತ್ತದೆ;

(ಬಿ) ಪ್ರಾಸಿಕ್ಯೂಷನ್ ಮಾಡುವುದಕ್ಕಾಗಿ ಅಗತ್ಯಪಡಿಸಿದ ಮಂಜೂರಾತಿಯು, ಆ ಪ್ರಾಸಿಕ್ಯೂಷನ್ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಸೂಚನೆಯ ಮೇರೆಗೆ ಅಥವಾ ನಿರ್ದಿಷ್ಟಪಡಿಸಿದ ವ್ಯಕ್ತಿಯ ಮಂಜೂರಾತಿಯೊಂದಿಗೆ ಇರತಕ್ಕುದು ಎಂಬ ಯಾವುದೇ ಅಗತ್ಯತೆಗೆ ಅಥವಾ ಅಂಥದೇ ಸ್ವರೂಪದ ಯಾವುದೇ ಅಗತ್ಯತೆಗೆ ಮಾಡಿದ ಉಲ್ಲೇಖವನ್ನು ಒಳಗೊಳ್ಳುತ್ತದೆ.

**20. ಲೋಕನೌಕರನು ಕಾನೂನು ಸಮ್ಮತ ಪರಿಶ್ರಮ ಧನವನ್ನು ಹೊರತುಪಡಿಸಿ ಇತರ ಪರಿತೋಷವನ್ನು ಅಂಗೀಕರಿಸುವಲ್ಲಿ ಪೂರ್ವಭಾವನೆ.**- (1) 7ನೇ ಪ್ರಕರಣದ ಅಥವಾ 11ನೇ ಪ್ರಕರಣದ ಅಥವಾ 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡ ಮತ್ತು (ಬಿ) ಖಂಡದ ಮೇರೆಗೆ ದಂಡನೀಯವಾದ ಅಪರಾಧದ ಯಾವುದೇ ಅಧಿವಿಚಾರಣೆಯಲ್ಲಿ, ಆಪಾದಿತ ವ್ಯಕ್ತಿಯು ಅವನಿಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಯಾವನೇ ವ್ಯಕ್ತಿಯಿಂದ ಯಾವುದೇ ಪರಿತೋಷ (ಕಾನೂನು ಸಮ್ಮತ ಪರಿಶ್ರಮಧನವನ್ನು ಹೊರತುಪಡಿಸಿ) ಅಥವಾ ಯಾವುದೇ ಬೆಲೆಯುಳ್ಳ ವಸ್ತುವನ್ನು ಅಂಗೀಕರಿಸಿದ್ದಾನೆ ಅಥವಾ ಪಡೆದುಕೊಂಡಿದ್ದಾನೆ ಅಥವಾ ಅಂಗೀಕರಿಸಲು ಒಪ್ಪಿಕೊಂಡಿದ್ದಾನೆ ಅಥವಾ ಪಡೆದುಕೊಳ್ಳಲು ಪ್ರಯತ್ನಿಸಿದ್ದಾನೆ ಎಂದು ರುಜುವಾತು ಪಡಿಸಿರುವಲ್ಲಿ, ತದ್ವಿರುದ್ಧವಾದುದನ್ನು ರುಜುವಾತುಪಡಿಸಿದ ಹೊರತು, ಅವನು, 7ನೇ ಪ್ರಕರಣದಲ್ಲಿ ನಮೂದಿಸಿದಂಥ ಉದ್ದೇಶ ಅಥವಾ ಬಹುಮಾನವೆಂದು ಅಥವಾ ಸಂದರ್ಭಾನುಸಾರ, ಪ್ರತಿಫಲವಿಲ್ಲದೆ ಅಥವಾ ಅದು ಸಾಕಷ್ಟಲ್ಲವೆಂದು ಅವನಿಗೆ ಗೊತ್ತಿರುವಂಥ ಪ್ರತಿಫಲಕ್ಕಾಗಿ ಸಂದರ್ಭಾನುಸಾರ ಆ ಪರಿತೋಷ ಅಥವಾ ಆ ಬೆಲೆಯುಳ್ಳ ವಸ್ತುವನ್ನು ಅಂಗೀಕರಿಸಿದ್ದಾನೆ ಅಥವಾ ಪಡೆದುಕೊಂಡಿದ್ದಾನೆ ಅಥವಾ ಅಂಗೀಕರಿಸಲು ಒಪ್ಪಿದ್ದಾನೆ ಅಥವಾ ಪಡೆದುಕೊಳ್ಳಲು ಪ್ರಯತ್ನಿಸಿದ್ದಾನೆ ಎಂದು ಪೂರ್ವಭಾವನೆ ಮಾಡತಕ್ಕುದು.

(2) 12ನೇ ಪ್ರಕರಣದ ಮೇರೆಗೆ ಅಥವಾ 14ನೇ ಪ್ರಕರಣದ (ಬಿ) ಖಂಡದ ಮೇರೆಗೆ ದಂಡನೀಯವಾದ ಅಪರಾಧದ ಯಾವುದೇ ಅಧಿವಿಚಾರಣೆಯಲ್ಲಿ ಒಬ್ಬ ಆಪಾದಿತ ವ್ಯಕ್ತಿಯು ಯಾವುದೇ ಪರಿತೋಷ (ಕಾನೂನು ಸಮ್ಮತ ಪರಿಶ್ರಮ ಧನವನ್ನು ಹೊರತುಪಡಿಸಿ) ಅಥವಾ ಯಾವುದೇ ಬೆಲೆಯುಳ್ಳ ವಸ್ತುವನ್ನು ಕೊಟ್ಟಿದ್ದಾನೆ ಅಥವಾ ಕೊಡಲು ಮುಂದೆ ಬಂದಿದ್ದಾನೆ ಅಥವಾ ಕೊಡಲು ಪ್ರಯತ್ನಿಸಿದ್ದಾನೆ ಎಂದು ರುಜುವಾತು ಪಡಿಸಿರುವಲ್ಲಿ, ತದ್ವಿರುದ್ಧವಾದುದನ್ನು ರುಜುವಾತುಪಡಿಸಿದ ಹೊರತು, ಅವನು 7ನೇ ಪ್ರಕರಣದಲ್ಲಿ ನಮೂದಿಸಿದಂಥ ಉದ್ದೇಶ ಅಥವಾ

ಬಹುಮಾನವೆಂದು ಅಥವಾ ಸಂದರ್ಭಾನುಸಾರ ಪ್ರತಿಫಲವಿಲ್ಲದೆ ಅಥವಾ ಅದು ಸಾಕಷ್ಟಿಲ್ಲವೆಂದು ಅವನಿಗೆ ಗೊತ್ತಿರುವಂಥ ಪ್ರತಿಫಲಕ್ಕಾಗಿ ಸಂದರ್ಭಾನುಸಾರ, ಆ ಪರಿತೋಷ ಅಥವಾ ಆ ಬೆಲೆಯುಳ್ಳ ವಸ್ತುವನ್ನು ಕೊಟ್ಟಿದ್ದಾನೆ ಅಥವಾ ಕೊಡಲು ಮುಂದೆ ಬಂದಿದ್ದಾನೆ ಅಥವಾ ಕೊಡಲು ಪ್ರಯತ್ನಿಸಿದ್ದಾನೆ ಎಂದು ಪೂರ್ವಭಾವನೆ ಮಾಡತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ನ್ಯಾಯಾಲಯವು ಸದರಿ ಯಾವುದೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪೂರ್ವಭಾವನೆಯನ್ನು ಮಾಡಲು ಹಿಂದೆ ಹೇಳಿದ ಆ ಪರಿತೋಷವು ಅಥವಾ ವಸ್ತುವು ಅದರ ಅಭಿಪ್ರಾಯದಲ್ಲಿ ಭ್ರಷ್ಟಾಚಾರದ ಯಾವುದೇ ಊಹೆಯನ್ನು ನ್ಯಾಯಯುತವಾಗಿ ಮಾಡದೇ ಇರಬಹುದಾದಷ್ಟು ಕ್ಷುಲ್ಲಕವಾಗಿದ್ದರೆ, ನಿರಾಕರಿಸಬಹುದು.

**21. ಆಪಾದಿತ ವ್ಯಕ್ತಿಯು ಸಕ್ಷಮವಾದ ಸಾಕ್ಷಿದಾರನಾಗಿರತಕ್ಕುದು.**- ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಆರೋಪವನ್ನು ಹೊತ್ತಿರುವ ಯಾವನೇ ವ್ಯಕ್ತಿಯು, ಪ್ರತಿರಕ್ಷೆಗಾಗಿ ಸಕ್ಷಮ ಸಾಕ್ಷಿದಾರನಾಗಿರತಕ್ಕುದು ಮತ್ತು ಅವನ ವಿರುದ್ಧ ಅಥವಾ ಅವನೊಂದಿಗೆ ಅದೇ ಅಧಿವಿಚಾರಣೆಯಲ್ಲಿ ಆರೋಪವನ್ನು ಹೊತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಪಡಿಸುವುದಕ್ಕಾಗಿ ಪ್ರಮಾಣ ಮಾಡಿ ಸಾಕ್ಷ್ಯವನ್ನು ಕೊಡಬಹುದು:

ಪರಂತು -

(ಎ) ಅವನದೇ ಆದ ಕೋರಿಕೆಯ ಮೇಲಲ್ಲದೆ ಅವನನ್ನು ಸಾಕ್ಷಿದಾರನನ್ನಾಗಿ ಕರೆಯತಕ್ಕುದಲ್ಲ:

(ಬಿ) ಸಾಕ್ಷ್ಯವನ್ನು ಕೊಡಲು ಅವನು ತಪ್ಪಿರುವುದನ್ನು ಪ್ರಾಸಿಕ್ಯೂಷನ್ನಿನ ಯಾವುದೇ ಟೀಕೆಯ ವಿಷಯವನ್ನಾಗಿಸತಕ್ಕುದಲ್ಲ; ಅಥವಾ ಅದು ಅವನ ಅಥವಾ ಅದೇ ಅಧಿವಿಚಾರಣೆಯಲ್ಲಿ ಅವನೊಂದಿಗೆ ಆರೋಪವನ್ನು ಹೊತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ಪೂರ್ವಭಾವನೆಗೆ ಅವಕಾಶ ಕೊಡತಕ್ಕುದಲ್ಲ;

(ಸಿ) ಅವನ ಮೇಲೆ ಆರೋಪವನ್ನು ಹೊರಿಸಿರುವಂಥ ಅಪರಾಧವನ್ನು ಹೊರತುಪಡಿಸಿ ಇತರ ಯಾವುದೇ ಅಪರಾಧವನ್ನು ಅವನು ಮಾಡಿದ್ದಾನೆಂದು ಅಥವಾ ಅದರ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದಾನೆಂದು ಅಥವಾ ಅವನು ದುಶ್ಚಾರಿತ್ರ್ಯವುಳ್ಳವನೆಂದು ತೋರಿಸುವ ಪ್ರವೃತ್ತಿಯುಳ್ಳ ಯಾವುದೇ ಪ್ರಶ್ನೆಯನ್ನೂ-

(i) ಅವನ ಮೇಲೆ ಆರೋಪವನ್ನು ಹೊರಿಸಿರುವಂಥ ಅಪರಾಧದ ಬಗ್ಗೆ ಅವನು ತಪ್ಪಿತಸ್ಥನೆಂದು ತೋರಿಸಲು ಅಂಥ ಅಪರಾಧವನ್ನು ಅವನು ಮಾಡಿದ್ದಾನೆ ಅಥವಾ ಅದರ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಎಂಬ ರುಜುವಾತು ಅಂಗೀಕಾರಾರ್ಹವಾದ ಸಾಕ್ಷ್ಯವಾಗಿದ್ದ ಹೊರತು, ಅಥವಾ

(ii) ಅವನು ಅವನ ಸಚ್ಚಾರಿತ್ರ್ಯವನ್ನು ಸ್ಥಾಪಿಸುವ ದೃಷ್ಟಿಯಿಂದ ಪ್ರಾಸಿಕ್ಯೂಷನ್ನಿನ ಪರ ಯಾವನೇ ಸಾಕ್ಷಿದಾರನಿಗೆ ಖುದ್ದಾಗಿ ಅಥವಾ ಅವನ ನ್ಯಾಯವಾದಿಯ ಮೂಲಕ ಯಾವುದೇ ಪ್ರಶ್ನೆಯನ್ನು ಕೇಳಿದ್ದ ಅಥವಾ ಅವನ ಸಚ್ಚಾರಿತ್ರ್ಯದ ಬಗ್ಗೆ ಸಾಕ್ಷ್ಯವನ್ನು ಕೊಟ್ಟಿದ್ದ ಅಥವಾ ಪ್ರತಿರಕ್ಷೆಯ ಸ್ವರೂಪ ಅಥವಾ ಅದನ್ನು ನಡೆಸುವುದು ಪ್ರಾಸಿಕ್ಯೂಟರನ ಅಥವಾ ಪ್ರಾಸಿಕ್ಯೂಷನ್ನಿನ ಯಾವನೇ ಸಾಕ್ಷಿದಾರನ ಚಾರಿತ್ರ್ಯದ ಮೇಲೆ ಆರೋಪಣೆಗಳನ್ನು ಒಳಗೊಳ್ಳುವಂಥದ್ದವು ಆಗಿದ್ದ ಹೊರತು, ಅಥವಾ

(iii) ಅವನು ಅದೇ ಅಪರಾಧದ ಬಗ್ಗೆ ಆರೋಪಿತನಾಗಿರುವ ಯಾವನೇ ಇತರ ವ್ಯಕ್ತಿಯ ವಿರುದ್ಧ ಸಾಕ್ಷ್ಯವನ್ನು ಕೊಟ್ಟಿದ್ದ ಹೊರತು

- ಅವನಿಗೆ ಕೇಳತಕ್ಕುದಲ್ಲ ಮತ್ತು ಹಾಗೆ ಕೇಳಿದರೆ ಉತ್ತರಿಸಲು ಅವನನ್ನು ಅಗತ್ಯಪಡಿಸತಕ್ಕುದಲ್ಲ.

**22. ಕೆಲವು ಮಾರ್ಪಾಡುಗಳಿಗೆ ಒಳಪಟ್ಟು ದಂಡ ಪ್ರಕ್ರಿಯಾ ಸಂಹಿತೆ, 1973 ಇದು ಅನ್ವಯವಾಗತಕ್ಕುದು.**- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧಕ್ಕೆ ಸಂಬಂಧಪಟ್ಟಂತೆ ಯಾವುದೇ ವ್ಯವಹರಣೆಗೆ ಅವುಗಳ ಅನ್ವಯವು-

(ಎ) 243ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ "ಅನಂತರ ........ ಆಪಾದಿತನನ್ನು ಕರೆಯತಕ್ಕುದು" ಎಂಬ ಪದಗಳಿಗೆ ಬದಲಾಗಿ "ಆಪಾದಿತನನ್ನು ಕೂಡಲೇ ಅಥವಾ ಆ ನ್ಯಾಯಾಲಯವು ಅನುಮತಿಸಬಹುದಾದಂಥ ಕಾಲದೊಳಗೆ ಬರಹದಲ್ಲಿ ಅವನ ಸಾಕ್ಷಿದಾರರೆಂದು ಪರೀಕ್ಷಿಸಲು ಅವನು ಉದ್ದೇಶಿಸುವ ವ್ಯಕ್ತಿಗಳು ಯಾರಾದರೂ ಇದ್ದರೆ ಅವರ ಮತ್ತು ಅವನು ಅವಲಂಬಿಸಲು ಉದ್ದೇಶಿಸಿರುವಂಥ ದಸ್ತಾವೇಜುಗಳು (ಯಾವುವಾದರೂ ಇದ್ದರೆ) ಅವುಗಳ ಪಟ್ಟಿಯನ್ನು ಕೊಡಲು ಅಗತ್ಯಪಡಿಸತಕ್ಕುದು ಮತ್ತು ಅವನನ್ನು ಅನಂತರ ........... ಕರೆಯತಕ್ಕುದು" ಎಂಬ ಪದಗಳನ್ನು ಪ್ರತಿಯೋಜಿಸಿದ್ದಿದ್ದರೆ;

(ಬಿ) 309ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ, ಮೂರನೇ ಪರಂತುಕದ ತರುವಾಯ, ಈ ಕೆಳಕಂಡ ಪರಂತುಕವನ್ನು ಸೇರಿಸಲಾಗಿದ್ದಿದ್ದರೆ, ಎಂದರೆ:-

"ಅದೂ ಅಲ್ಲದೆ, ಆ ವ್ಯವಹರಣೆಗಳಿಗೆ ಪಕ್ಷಕಾರನಾಗಿರುವವನು 397ನೇ ಪ್ರಕರಣದ ಮೇರೆಗೆ ಒಂದು ಅರ್ಜಿಯನ್ನು ಮಾಡಿಕೊಂಡಿದ್ದಾನೆಂಬ ಕಾರಣ ಮಾತ್ರದಿಂದಲೇ ಆ ವ್ಯವಹರಣೆಯನ್ನು ಮುಂದಕ್ಕೆ ಹಾಕತಕ್ಕುದಲ್ಲ, ಅಥವಾ ಮುಂದೂಡತಕ್ಕುದಲ್ಲ";

(ಸಿ) 317ನೇ ಪ್ರಕರಣದ (2)ನೇ ಉಪ-ಪ್ರಕರಣದ ತರುವಾಯ, ಈ ಕೆಳಕಂಡ ಉಪಪ್ರಕರಣವನ್ನು ಸೇರಿಸಲಾಗಿದ್ದರೆ, ಎಂದರೆ:-

"(3) (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆ ನ್ಯಾಯಾಧೀಶನು ಅವನು ಸೂಕ್ತವೆಂದು ಯೋಚಿಸಿದರೆ ಮತ್ತು ಅವನು ಕಾರಣವನ್ನು ದಾಖಲು ಮಾಡಿ, ಆಪಾದಿತ ಅಥವಾ ಅವನ ನ್ಯಾಯವಾದಿಯ ಗೈರುಹಾಜರಿಯಲ್ಲಿ ವಿಚಾರಣೆ ಅಥವಾ ಅಧಿವಿಚಾರಣೆಯನ್ನು ಮುಂದುವರಿಸಬಹುದು ಮತ್ತು ಪಾಟೀ ಸವಾಲಿಗಾಗಿ ಸಾಕ್ಷಿದಾರನನ್ನು ಪುನಃ ಕರೆಯುವ ಆಪಾದಿತನ ಹಕ್ಕಿಗೆ ಒಳಪಟ್ಟು ಯಾವನೇ ಸಾಕ್ಷಿದಾರನ ಸಾಕ್ಷ್ಯವನ್ನು ದಾಖಲು ಮಾಡಬಹುದು";

(ಡಿ) 397ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ, ವಿವರಣೆಗೆ ಮುಂಚೆ, ಈ ಕೆಳಕಂಡ ಪರಂತುಕವನ್ನು ಸೇರಿಸಲಾಗಿದ್ದಿದ್ದರೆ, ಎಂದರೆ:-

"ಪರಂತು, ಅಂಥ ವ್ಯವಹರಣೆಗಳಿಗೆ ಪಕ್ಷಕಾರನಾದವನು ಮಾಡಿಕೊಂಡ ಅರ್ಜಿಯ ಮೇಲೆ ನ್ಯಾಯಾಲಯವು ಈ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸುವಲ್ಲಿ ಆ ನ್ಯಾಯಾಲಯವು ಸಾಮಾನ್ಯವಾಗಿ ಆ ವ್ಯವಹರಣೆಗಳ ದಾಖಲೆಗಾಗಿ":-

(ಎ) ಆ ದಾಖಲೆಯನ್ನು ಏಕೆ ಕೋರಕೂಡದು ಎಂಬ ಬಗ್ಗೆ ಕಾರಣವನ್ನು ತೋರಿಸಲು ಅವಕಾಶವನ್ನು ಆ ಇತರ ಪಕ್ಷಕಾರನಿಗೆ ಕೊಟ್ಟ ಹೊರತು; ಅಥವಾ

(ಬಿ) ಅದಕ್ಕೆ ಆ ಪ್ರಮಾಣಿತ ಪ್ರತಿಗಳಿಂದ ಆ ವ್ಯವಹರಣೆಗಳ ದಾಖಲೆಯ ಪರೀಕ್ಷೆಯನ್ನು ಮಾಡಬಹುದೆಂದು ಮನದಟ್ಟಾದರೆ

- ಕೋರತಕ್ಕುದಲ್ಲ",

- ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕುದು.

**23. 13 (1) (ಸಿ) ಪ್ರಕರಣದ ಮೇರೆಗಿನ ಅಪರಾಧಕ್ಕೆ ಸಂಬಂಧಪಟ್ಟಂತೆ ಆರೋಪದಲ್ಲಿನ ವಿವರಗಳು.**- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಅಡಕವಾಗಿದ್ದಾಗ್ಯೂ, 13ನೇ ಪ್ರಕರಣದ (1)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗಿನ ಅಪರಾಧವನ್ನು ಆರೋಪಿತನ ಮೇಲೆ ಹೊರಿಸಿರುವಾಗ ಆರೋಪದಲ್ಲಿ ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಆ ಅಪರಾಧವನ್ನು ಮಾಡಲಾಗಿದೆ ಎಂದು ಹೇಳಲಾಗಿದೆಯೋ ಆ ಸ್ವತ್ತನ್ನು ಮತ್ತು ನಿರ್ದಿಷ್ಟವಾದ ಬಾಬುಗಳನ್ನು ಅಥವಾ ಖಚಿತವಾದ ದಿನಾಂಕಗಳನ್ನು ನಿರ್ದಿಷ್ಟಪಡಿಸದೆ ಯಾವ ದಿನಾಂಕಗಳ ನಡುವೆ ಆ ಅಪರಾಧವನ್ನು ಮಾಡಲಾಗಿದೆ ಎಂದು ಹೇಳಲಾಗಿದೆಯೋ ಆ ದಿನಾಂಕಗಳನ್ನು ಆ ಆರೋಪದಲ್ಲಿ ವಿವರಿಸಿದರೆ ಸಾಕಷ್ಟಾಗಿರತಕ್ಕುದು ಮತ್ತು ಹಾಗೆ ರೂಪಿಸಿದ ಆರೋಪವನ್ನು ಸದರಿ ಸಂಹಿತೆಯ 219ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಒಂದು ಅಪರಾಧದ ಬಗ್ಗೆ ಆರೋಪವಾಗಿರುವುದಾಗಿ ಭಾವಿಸತಕ್ಕುದು:

ಪರಂತು, ಅಂಥ ದಿನಾಂಕಗಳ ಮೊದಲ ಮತ್ತು ಕೊನೆಯ ದಿನಾಂಕಗಳ ನಡುವೆ ಒಳಗೊಂಡ ಕಾಲವು ಒಂದು ವರ್ಷವನ್ನು ಮೀರತಕ್ಕುದಲ್ಲ.

**24. ಲಂಚ ಕೊಡುವವನು ಕೊಟ್ಟ ಹೇಳಿಕೆಯು ಅವನನ್ನು ಪ್ರಾಸಿಕ್ಯೂಷನ್ನಿಗೆ ಒಳಪಡಿಸತಕ್ಕುದಲ್ಲ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅವನು ಯಾವುದೇ ಪರಿತೋಷವನ್ನು (ಕಾನೂನು ಸಮ್ಮತ ಪರಿಶ್ರಮಧನವನ್ನು ಹೊರತುಪಡಿಸಿ) ಅಥವಾ ಯಾವುದೇ ಬೆಲೆಯುಳ್ಳ ವಸ್ತುವನ್ನು ಆ ಲೋಕನೌಕರನಿಗೆ ಕೊಡಮಾಡಿದನೆಂದು ಅಥವಾ ಕೊಡಮಾಡಲು ಒಪ್ಪಿಕೊಂಡನೆಂದು 7 ರಿಂದ 11ನೇ ಪ್ರಕರಣಗಳ ಮೇರೆಗಿನ ಅಥವಾ 13ನೇ ಪ್ರಕರಣ ಅಥವಾ 15ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಲೋಕನೌಕರನ ವಿರುದ್ಧ ಹೂಡಿದ ಯಾವುದೇ ವ್ಯವಹರಣೆಯಲ್ಲಿ ಒಬ್ಬ ವ್ಯಕ್ತಿಯು ಕೊಟ್ಟ ಹೇಳಿಕೆಯು 12ನೇ ಪ್ರಕರಣದ ಮೇರೆಗೆ ಅಂಥ ವ್ಯಕ್ತಿಯನ್ನು ಪ್ರಾಸಿಕ್ಯೂಷನ್ನಿಗೆ ಒಳಪಡಿಸತಕ್ಕುದಲ್ಲ.

**25. ಸೇನಾ, ನೌಕಾ ಮತ್ತು ವಾಯುಸೇನೆ ಅಥವಾ ಇತರ ಕಾನೂನಿಗೆ ಬಾಧಕವನ್ನುಂಟುಮಾಡತಕ್ಕುದಲ್ಲ.**- (1) ಈ ಅಧಿನಿಯಮದಲ್ಲಿರುವುದಾವುದೂ, ಸೇನಾ ಅಧಿನಿಯಮ, 1950 (1950ರ 45), (1950ರ 46), (1957ರ 62), (1968ರ 47), (1978ರ 30), (1986ರ 47), ವಾಯು ಸೇನಾ ಅಧಿನಿಯಮ, 1950, ನೌಕಾ ಸೇನಾ ಅಧಿನಿಯಮ, 1957, ಗಡಿರಕ್ಷಣಾ ಸೇನಾ ಅಧಿನಿಯಮ, 1968, ಕರಾವಳಿ ರಕ್ಷಣಾ ಅಧಿನಿಯಮ, 1978 ಮತ್ತು ರಾಷ್ಟ್ರೀಯ ಭದ್ರತಾ ರಕ್ಷಣಾ ಅಧಿನಿಯಮ, 1986 ಇವುಗಳ ಮೇರೆಗಿನ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಚಲಾಯಿಸಬಹುದಾದ ಅಧಿಕಾರವ್ಯಾಪ್ತಿಗೆ ಅಥವಾ ಅವುಗಳಿಗೆ ಅನ್ವಯವಾಗಬಹುದಾದ ಪ್ರಕ್ರಿಯೆಗೆ ಬಾಧಕವನ್ನುಂಟುಮಾಡತಕ್ಕುದಲ್ಲ.

(2) ಸಂದೇಹಗಳ ನಿವಾರಣೆಗಾಗಿ, (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಯಾವುದೇ ಅಂಥ ಕಾನೂನಿನ ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಧೀಶನ ನ್ಯಾಯಾಲಯವನ್ನು ಸಾಮಾನ್ಯ ಕ್ರಿಮಿನಲ್ ನ್ಯಾಯದ ನ್ಯಾಯಾಲಯವೆಂದು ಭಾವಿಸತಕ್ಕುದೆಂದು ಈ ಮೂಲಕ ಘೋಷಿಸಲಾಗಿದೆ.

**26. 1952ರ ಅಧಿನಿಯಮ 46ರ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶರು ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶರಾಗಿರತಕ್ಕುದು.**- ಯಾವುದೇ ಪ್ರದೇಶ ಅಥವಾ ಪ್ರದೇಶಗಳಿಗಾಗಿ ಆಪರಾಧಿಕ ಕಾನೂನು ತಿದ್ದುಪಡಿ ಅಧಿನಿಯಮ, 1952ರ ಮೇರೆಗೆ ನೇಮಕಗೊಂಡ ಮತ್ತು ಈ ಅಧಿನಿಯಮವು ಪ್ರಾರಂಭವಾದಂದು ಪದವನ್ನು ಧಾರಣಮಾಡಿರುವ ಪ್ರತಿಯೊಬ್ಬ ವಿಶೇಷ ನ್ಯಾಯಾಧೀಶನನ್ನು, ಆ ಪ್ರದೇಶ ಅಥವಾ ಪ್ರದೇಶಗಳಿಗಾಗಿ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅಂಥ ಪ್ರಾರಂಭದಂದು ಮತ್ತು ಅಂದಿನಿಂದ ಅಂಥ ಪ್ರತಿಯೊಬ್ಬ ನ್ಯಾಯಾಧೀಶನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಂಥ ಪ್ರಾರಂಭದಂದು ಅವನ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹರಣೆಗಳೊಂದಿಗೆ ವ್ಯವಹರಿಸುವುದು ಮುಂದುವರಿಯತಕ್ಕುದು.

**27. ಅಪೀಲು ಮತ್ತು ಪುನರೀಕ್ಷಣೆ.**- ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಉಚ್ಚನ್ಯಾಯಾಲಯವು, ಅವುಗಳು ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಉಚ್ಚನ್ಯಾಯಾಲಯಕ್ಕೆ ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ಇದು ಪ್ರದಾನ ಮಾಡಿದ ಅಪೀಲು ಮತ್ತು ಪುನರೀಕ್ಷಣೆಯ ಎಲ್ಲಾ ಅಧಿಕಾರಗಳನ್ನು, ಆ ವಿಶೇಷ ನ್ಯಾಯಾಧೀಶನ ನ್ಯಾಯಾಲಯವು ಆ ಉಚ್ಚನ್ಯಾಯಾಲಯದ ಸ್ಥಳೀಯ ಪರಿಮಿತಿಗಳೊಳಗೆ ಪ್ರಕರಣಗಳನ್ನು ಅಧಿವಿಚಾರಿಸುವ ಸೆಷನ್ಸ್ ನ್ಯಾಯಾಲಯವಾಗಿದ್ದಿದ್ದರೆ ಹೇಗೋ ಹಾಗೆ ಚಲಾಯಿಸಬಹುದು.

**28. ಅಧಿನಿಯಮವು ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕುದು.**- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕುದು ಮತ್ತು ಅದನ್ನು ಅಲ್ಪೀಕರಿಸಿ ಇರತಕ್ಕುದಲ್ಲ, ಮತ್ತು ಇದರಲ್ಲಿ ಅಡಕವಾಗಿರುವುದು ಯಾವುದೂ, ಯಾವನೇ ಲೋಕನೌಕರನಿಗೆ ಅವನ ವಿರುದ್ಧ ಹೂಡಬಹುದಾಗಿರುವಂಥ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ವ್ಯವಹರಣೆಯಿಂದ ವಿನಾಯಿತಿಯನ್ನು ಕೊಡತಕ್ಕುದಲ್ಲ.

**29. 1944ರ 38ನೇ ಅಧ್ಯಾದೇಶದ ತಿದ್ದುಪಡಿ.**- ಆಪರಾಧಿಕ ಕಾನೂನು ತಿದ್ದುಪಡಿ ಅಧ್ಯಾದೇಶ, 1944 ಇದರಲ್ಲಿ ,-

(ಎ) 3ನೇ ಪ್ರಕರಣದ (1)ನೇ ಉಪ-ಪ್ರಕರಣ, 9ನೇ ಪ್ರಕರಣದ (1)ನೇ ಉಪ-ಪ್ರಕರಣ, 10ನೇ ಪ್ರಕರಣದ (ಎ) ಖಂಡ, 11ನೇ ಪ್ರಕರಣದ (1)ನೇ ಉಪ-ಪ್ರಕರಣ ಮತ್ತು 13ನೇ ಪ್ರಕರಣದ (1)ನೇ ಉಪ-ಪ್ರಕರಣ ಇವುಗಳಲ್ಲಿ "ರಾಜ್ಯ ಸರ್ಕಾರ" ಎಂಬ ಪದಗಳಿಗೆ ಬದಲಾಗಿ ಅವುಗಳು ಸಂಭವಿಸುವಲ್ಲೆಲ್ಲಾ "ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ ಕೇಂದ್ರ ಸರ್ಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು;

(ಬಿ) 10ನೇ ಪ್ರಕರಣದಲ್ಲಿ (ಎ) ಖಂಡದಲ್ಲಿ "ಮೂರು ತಿಂಗಳುಗಳು" ಎಂಬ ಪದಗಳಿಗೆ ಬದಲಾಗಿ "ಒಂದು ವರ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು;

(ಸಿ) ಅನುಸೂಚಿಯಲ್ಲಿ, -

(i) 1ನೇ ಪ್ಯಾರಾವನ್ನು ಲೋಪಿಸತಕ್ಕುದು;

(ii) 2 ಮತ್ತು 4ನೇ ಪ್ಯಾರಾಗಳಲ್ಲಿ,-

(ಎ) "ಒಂದು ಸ್ಥಳೀಯ ಪ್ರಾಧಿಕಾರ " ಎಂಬ ಪದಗಳ ತರುವಾಯ ಅಥವಾ ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಿದ ಒಂದು ನಿಗಮ ಅಥವಾ ಸರ್ಕಾರ ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 617ನೇ ಪ್ರಕರಣದಲ್ಲಿ ಪರಿಭಾಷಿಸಿರುವಂತೆ ಒಂದು ಸರ್ಕಾರಿ ಕಂಪನಿಯ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರಿಂದ ಸಹಾಯವನ್ನು ಪಡೆಯುವ ಒಂದು ಪ್ರಾಧಿಕಾರ ಅಥವಾ ನಿಕಾಯ ಅಥವಾ ಅಂಥ ನಿಗಮ, ಪ್ರಾಧಿಕಾರ, ನಿಕಾಯ ಅಥವಾ ಸರ್ಕಾರಿ ಕಂಪನಿಯಿಂದ ಸಹಾಯವನ್ನು ಪಡೆಯುವ ಸಂಘ" ಎಂಬ ಪದಗಳು ಮತ್ತು ಅಂಕಿಗಳನ್ನು ಸೇರಿಸತಕ್ಕುದು;

(ಬಿ) "ಅಥವಾ ಪ್ರಾಧಿಕಾರ" ಎಂಬ ಪದಗಳ ತರುವಾಯ, "ಅಥವಾ ನಿಗಮ ಅಥವಾ ನಿಕಾಯ ಅಥವಾ ಸರ್ಕಾರಿ ಕಂಪನಿ ಅಥವಾ ಸಂಘ" ಎಂಬ ಪದಗಳನ್ನು ಸೇರಿಸತಕ್ಕುದು;

(iii) 4ಎ ಪ್ಯಾರಾಕ್ಕೆ ಬದಲಾಗಿ, ಈ ಕೆಳಕಂಡ ಪ್ಯಾರಾವನ್ನು ಪ್ರತಿಯೋಜಿಸತಕ್ಕುದು, ಎಂದರೆ.-

"4ಎ. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ ಮೇರೆಗೆ ದಂಡನೀಯವಾದ ಒಂದು ಅಪರಾಧ;"

(iv) 5ನೇ ಪ್ಯಾರಾದಲ್ಲಿ "2, 3 ಮತ್ತು 4ನೇ ಬಾಬುಗಳು" ಎಂಬ ಪದಗಳು ಮತ್ತು ಅಂಕಿಗಳಿಗೆ ಬದಲಾಗಿ "2, 3, 4 ಮತ್ತು 4ಎ ಬಾಬುಗಳು" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕುದು.

**30. ನಿರಸನ ಮತ್ತು ಉಳಿಸುವಿಕೆ.**- (1) ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1947 (1947ರ 2) ಮತ್ತು ಆಪರಾಧಿಕ ಕಾನೂನು ತಿದ್ದುಪಡಿ ಅಧಿನಿಯಮ, 1952 (1952ರ 46) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಆದರೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣದ ಅನ್ವಯಕ್ಕೆ ಬಾಧಕವಾಗದಂತೆ, ಹಾಗೆ ನಿರಸನಗೊಳಿಸಿದ ಅಧಿನಿಯಮಗಳ ಮೇರೆಗೆ ಅಥವಾ ಅವುಗಳ ಅನುಸರಣೆಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಲಾಗಿದೆ ಎಂದು ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯ ಅಥವಾ ಕ್ರಮವನ್ನು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟರಮಟ್ಟಿಗೆ, ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಅಥವಾ ಅದರ ಅನುಸರಣೆಯಲ್ಲಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕುದು.

**31. 1860ರ 45ನೇ ಅಧಿನಿಯಮದ ಕೆಲವು ಪ್ರಕರಣಗಳನ್ನು ಲೋಪಿಸುವುದು.**- ಭಾರತ ದಂಡಸಂಹಿತೆಯ 161 ರಿಂದ 165ಎ ವರೆಗಿನ ಪ್ರಕರಣಗಳನ್ನು (ಅವೆರಡನ್ನೂ ಒಳಗೊಂಡು)

ಲೋಪಿಸತಕ್ಕುದು ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣವು ಹಾಗೆ ಲೋಪಿಸುವುದಕ್ಕೆ ಸದರಿ ಪ್ರಕರಣಗಳನ್ನು ಕೇಂದ್ರ ಅಧಿನಿಯಮದ ಮೂಲಕ ನಿರಸನಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

*　　*　　*